# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY


ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038

ಸಂಪುಟ:02 • ಸಂಚಿಕೆ: 98 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 13.10.2024 • ಭಾನುವಾರ • ಪುಟ:04 • ಬೆಲೆ:2
Volume:02 • Issue: 98 • PRGI No:KARKAN/2023/88055 • VIJAYANAGARA • 13.10.2024 • Sunday • Page:04 • Rs:2

HAMPI TIMES No.1 Leading Local News Paper
95,000 E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಚಿಕ್ಕ ಮೊತ್ತ ದೊಡ್ಡ ಜಾಹೀರಾತು
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
95 ಸಾವಿರಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper
ಹಂಪಿ ಟೈಮ್ಸ್ ಇ-ಪೇಪರ್
ಹಂಪಿ ಟೈಮ್ಸ್ ವಿಸ್ತಾರ : ಕರ್ನಾಟಕ, ಮಹರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

## ಆನಂದ ಬಾಣ




# ಧರ್ಮದ ಗುಡ್ಡದಲ್ಲಿ ದೇವರ ಬನ್ನಿ ಅದ್ದೂರಿ

## ಬಸವನದುರ್ಗದ ಶ್ರೀ ಚೆನ್ನಬಸವೇಶ್ವರಸ್ವಾಮಿ, ತಾಲೂಕಿನ ವಿವಿಧೆಡೆಗಳ ಶಕ್ತಿ ದೇವತೆಗಳ ಸಮ್ಮಿಲನ ಹಂಪಿ ದಸರ ನೆನಪಿಸಿದ ಉತ್ಸವ | ಸಂಭ್ರಮಾಚರಣೆ ಶಾಂತಿಯುತ ಎಲ್ಲೆಡೆ ಪೋಲೀಸ್ ಬಿಗಿ ಭದ್ರತೆ

■ **ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕಿನ ಬಸವನದುರ್ಗ ಚನ್ನಬಸವೇಶ್ವರಸ್ವಾಮಿ ಮತ್ತು ಹೊಸಪೇಟೆಯ ಏಳುಕೇರಿ ಸೇರಿದಂತೆ ತಾಲೂಕಿನ ವಿವಿಧ ಪ್ರದೇಶಗಳಿಂದ ಪಲ್ಲಕ್ಕಿಯಲ್ಲಿ ಆಗಮಸಿದ್ದ 20ಕ್ಕೂ ಅಧಿಕ ಶಕ್ತಿ ದೇವತೆಗಳ ಉತ್ಸವ ಮೂರ್ತಿಗಳು ಶುಕ್ರವಾರ ನಾಗೇನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಗುಡಿ ಓಬಳಾಪುರದಲ್ಲಿರುವ ಧರ್ಮದಗುಡ್ಡದಲ್ಲಿ ಸಮ್ಮಿಲನಗೊಂಡು ಗುಡ್ಡದ ಶ್ರೀಚನ್ನಬಸವೇಶ್ವರಸ್ವಾಮಿಗೆ ಮತ್ತು ನಿಜಲಿಂಗಮ್ಮದೇವಿಗೆ ಪೂಜೆಸಲ್ಲಿಸಿ, ಬನ್ನಿ ವೃಕ್ಷಕ್ಕೆ ಪ್ರದಕ್ಷಿಣೆ ಹಾಕಿ ದೇವರ ಬನ್ನಿಮುಡಿದ ಕ್ಷಣಗಳನ್ನು ಸಾವಿರಾರು ಭಕ್ತರು ಕಣ್ತುಂಬಿಕೊಂಡರು.

ಮಧ್ಯಾಹ್ನ 2 ಗಂಟೆಯಿಂದ ಸುರಿಯುತ್ತಿದ್ದ ಮಳೆಯಲ್ಲೆ ಹೊಸಪೇಟೆ ಏಳುಕೇರಿ ಮತ್ತು ಕಮಲಾಪುರ, ಕೊಂಡನಾಯಕನಹಳ್ಳಿ, ಚಿತ್ತವಾಡ್ಗಿ, ನರಸಾಪುರ, ಬೆನಕಾಪುರ, ನಾಗೇನಹಳ್ಳಿ ಸೇರಿದಂತೆ ಇತರೆಡೆಗಳಿಂದ ಶಕ್ತಿದೇವತೆಗಳ ಪಲ್ಲಕ್ಕಿಯನ್ನು ಹೊತ್ತ ಭಕ್ತರು ಮಳೆಯನ್ನೂ ಲೆಕ್ಕಿಸದೆ ಧರ್ಮದ ಗುಡ್ಡದತ್ತ ಓಡುತ್ತಾ




ಬಂದರು. ಪಲ್ಲಕ್ಕಿಗಳ ಹಿಂದೆ ಯುವಕರ ತಂಡಗಳು ಬಣ್ಣಬಣ್ಣದ ಟೀಶರ್ಟ್ ತೊಟ್ಟು ಹೆಜ್ಜೆಹಾಕಿದರು. ಪ್ರಯಾಣಿಕರು ಹೊತ್ತ ನೂರಾರು ವಾಹನಗಳು ಗುಡ್ಡದತ್ತ ಮುಖಮಾಡಿದ್ದವು. 2 ಕಿ.ಮೀಟರ್ಗೂ ಉದ್ದ ಜನ ದಟ್ಟಣೆಯಿಂದ ರಸ್ತೆ ತುಂಬಿತುಳುಕುತ್ತಿತ್ತು. ಹಂಪಿ ಅಂಗಳದ ಧರ್ಮದಗುಡ್ಡದಲ್ಲಿ ದೇವರ ಬನ್ನಿಮುಡಿಯುವ ಕ್ಷಣಗಳನ್ನು ಕಣ್ತುಂಬಿಕೊಳ್ಳುವ ಸೌಭಾಗ್ಯ ಈ ಭಾಗದ ಭಕ್ತರು ತಮ್ಮದಾಗಿಸಿಕೊಂಡರು.

ಬಸವನದುರ್ಗ ಶ್ರೀಚನ್ನಬಸವೇಶ್ವರ ದೇವಸ್ಥಾನ ಸಮಿತಿ ಪದಾಧಿಕಾರಿಗಳು, ದೈವ, ನಾಗೇನಹಳ್ಳಿ ಹಿರಿಯ ಮುಖಂಡರು, ಗ್ರಾಮ ಪಂಚಾಯಿತಿ ಸದಸ್ಯರು, ಯುವಕರು, ಏಳುಕೇರಿ ದೈವಸ್ಥರು, ಸೇರಿದಂತೆ ಸಾವಿರಾರು ಭಕ್ತರು ಇದ್ದರು. ನಾಗೇನಹಳ್ಳಿ ಗ್ರಾಪಂ ಸದಸ್ಯರು, ಅಧಿಕಾರಿ ಸಿಬ್ಬಂದಿಗಳು ಒಂದು ವಾರದ ಮುಂಚಿನಿಂದ ಸ್ವಚ್ಛತೆ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಶ್ರಮಿಸಿದರು. ವಿಜಯನಗರ ಜಿಲ್ಲಾ ಎಸ್ಪಿ ಶ್ರೀಹರಿಬಾಬುಬಿ.ಎಲ್. ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಟ್ರಾಫಿಕ್ ಜಾಮ್ ಆಗದಂತೆ ಯೋಜನಾ ಬದ್ಧವಾಗಿ ಪೊಲೀಸರನ್ನು ನಿಯೋಜಿಸಿ, ಪಾರ್ಕಿಂಗ್ ವ್ಯವಸ್ಥೆ ಕೈಗೊಂಡಿದ್ದರಿಂದ ಶಾಂತಿಯುತವಾಗಿ ಸಂಭ್ರಮದಿಂದ ದೇವರ ಬನ್ನಿ ಮಹೋತ್ಸವ ಅದ್ದೂರಿಯಿಂದ ನಡೆಯಿತು. ಪೊಲೀಸರ ಕಾರ್ಯಕ್ಕೆ ಜನರು ಮೆಚ್ಚುಗೆ ವ್ಯಕ್ತಪಡಿಸಿ ಧನ್ಯವಾದಗಳನ್ನು ತಿಳಿಸಿದರು.










ಹೊಸಪೇಟೆಯ ಎಸ್ ಕೆ ಸಮಾಜದ ಅಂಬಾ ಭವಾನಿ ದೇವಸ್ಥಾನದಲ್ಲಿ ದೇವಿಗೆ ದಸರಾ ವಿಶೇಷ ಪೂಜೆ ನೆರವೇರಿಸಲಾಯಿತು





ಮೈಸೂರು ದಸರಾ ಸ್ತಬ್ಧಚಿತ್ರ ಮೆರವಣಿಗೆಯಲ್ಲಿ ವಿಜಯನಗರ ಜಿಲ್ಲಾ ಪಂಚಾಯಿತಿವತಿಯಿಂದ ವಿಜಯನಗರ ಸಾಮ್ರಾಜ್ಯದ ಆಡಳಿತವದಿಯಲ್ಲಿ ಹಂಪಿಯ ಬೀದಿಗಳಲ್ಲಿ ಚಿನ್ನ ವಜ್ರ ವೈಢೂರ್ಯ ಮಾರಾಟದ ದೃಶ್ಯ.. ಜನರ ಗಮನ ಸೆಳೆಯಿತು.

ಪುಟ 2ರಲ್ಲಿ
ಭಯ, ಅನುಮಾನವೇ ಮುಪ್ಪು-ಎಚ್ಚರಿಕೆ ಭರವಸೆಯೇ ಯೌವ್ವನ...
ಮರೆಯಾಗುತ್ತಿರುವ ಮಾನವೀಯ ಮೌಲ್ಯಗಳು
ನಮ್ಮ ಜೀವನಕ್ಕೆ ನಾವೇ ಹೊಣೆ



ಹೊಸಪೇಟೆ ತಾಲೂಕಿನ ಕಮಲಾಪುರದ ಕೋಟೆಯ ಬನ್ನಿಮಹಾಕಾಳಿ ದೇವಿ ಭಕ್ತರಿಂದ ಮೊಗ್ಗಿನ ಜಡೆಯಿಂದ ಅಲಂಕೃತಗೊಂಡು ಪೂಜೆಗೊಂಡಳು

# ತುಂಬಿ ತುಳುಕುತ್ತಿರುವ ಕೊಟ್ಟೂರು ಕೆರೆ ಕೋಡಿ

## 850 ಎಕರೆಗೆ ಬೇಕಾಗುವಷ್ಟು ನೀರನ್ನು ಸಂಗ್ರಹಣ ಸಾಮರ್ಥ್ಯ ಹೊಂದಿದ ಬೃಹತ್ ಕೆರೆ | 1889 ರಲ್ಲಿ ನಿರ್ಮಾಣ ಕೋಡಿಬಾಯಿ ಕಟ್ಟೆಯಲ್ಲಿ ರಂಧ್ರ | ನೀರು ಪೋಲಾಗುವ ಆತಂಕ | ಅಧಿಕಾರಿಗಳು ಎಚ್ಚೆತ್ತುಕೊಂಡರೆ ಅಂತರ್ಜಲ ವೃದ್ಧಿ

■ **ಹಂಪಿ ಟೈಮ್ಸ್ ಕೊಟ್ಟೂರು**

ಕೊಟ್ಟೂರು ತಾಲೂಕಿನಾದ್ಯಂತ ಶುಕ್ರವಾರ ರಾತ್ರಿ ಉತ್ತಮವಾಗಿ ಸುರಿದ ಚಿತ್ತಮಳೆಗೆ, ಕೊಟ್ಟೂರು ಕೆರೆ ಶನಿವಾರ ಮಧ್ಯಾಹ್ನ ತುಂಬಿ ಹರಿದಿದೆ, ಕೆರೆಯ ಕೋಡಿ ಬಿದ್ದ ವಿಷಯ ತಿಳಿದ ಪಟ್ಟಣದ ಜನರು ತಂಡು ತಂಡಾಗಿ ಆಗಮಿಸಿ, ತುಂಬಿ ಹರಿಯುವ ಕೆರೆಯನ್ನು ವೀಕ್ಷಿಸಿ ಹರ್ಷ ವ್ಯಕ್ತಪಡಿಸಿದರು.

2022 ಇದೇ ಅಕ್ಟೋಬರ್ ತಿಂಗಳಲ್ಲಿ 10 ವರ್ಷಗಳ ನಂತರ ಕೆರೆ ತುಂಬಿತ್ತು. ಮತ್ತೆ 2 ವರ್ಷದ ನಂತರ ಇಂದು ವಿಜಯ ದಶಮಿ ದಿನದಂದು ಕೆರೆ ತುಂಬಿರುವುದು ಕೊಟ್ಟೂರು ಮತ್ತು ತಾಲೂಕಿನ ಜನರಲ್ಲಿ ಸಂಭ್ರಮ ಮನೆ ಮಾಡಿದೆ.

ಕೊಟ್ಟೂರು ಕೆರೆ ಸುಮಾರು 930 ಎಕ್ಕರಿಗೂ ಹೆಚ್ಚು ವಿಸ್ತೀರ್ಣ ಹೊಂದಿದ್ದು 850 ಎಕ್ಕರೆಗೆ ಬೇಕಾಗುವಷ್ಟು ನೀರನ್ನು ಸಂಗ್ರಹಣ ಸಾಮರ್ಥ್ಯ ಹೊಂದಿದ ಬೃಹತ್ ಕೆರೆ. 1889 ರಲ್ಲಿ ಇದರ ನಿರ್ಮಾಣ.

ಅಂದಿನಿಂದ ಕೆರೆ ಕೆಳ ಬಾಗದ ಕೊಟ್ಟೂರಿನ ಚಿರಿಬಿ ರಸ್ತೆ, ಕೂಡ್ಲಿಗಿ ರಸ್ತೆ ಹಾಗೂ ಹಗರಿಬೊಮ್ಮನಹಳ್ಳಿ ರಸ್ತೆಯ ಮಾರ್ಗದಲ್ಲಿ ಎತ್ತ ನೋಡಿದರತ್ತ ಭತ್ತದ ಗದ್ದೆಗಳು ನೋಡುಗರ ಕಣ್ಣಿಗೆ ಸಂಭ್ರಮ ಉಂಟು ಮಾಡುತ್ತಿದ್ದವು.


1993 ರ ಸುಮಾರಿಗೆ ಕೆರೆ ಭಾಗಶಃ ತುಂಬುತ್ತಿತ್ತೆ ವಿನಾಃ ಕೆರೆ ಸಂಪೂರ್ಣ ತುಂಬದ ಕಾರಣ ಗದ್ದೆಗಳಲ್ಲಿ



ಭತ್ತ ಇಲ್ಲದಂತಾಗಿ. ಅಂದಿಗು ಇಂದಿಗೂ ಇಲ್ಲಿನ ಗದ್ದೆಗಳಲ್ಲಿ ಭತ್ತದ ಫಸಲು ಮರೀಚಿಕೆ ಆಗಿದೆ. 33 ವರ್ಷಗಳಲ್ಲಿ ಕೆರೆ ಮಾತ್ರ 3–4 ಬಾರಿ ತುಂಬಿದೆ. ಅಂತರ್ಜಲ ನಿರ್ವಹಣೆಗಾಗಿ ಕೆರೆಯ ನೀರು ರೈತರಿಗೆ ಭತ್ತ ಬೆಳೆಯಲು ಪೂರೈಕೆ ಆಗದಂತಾಯಿತು, ಎಂದು ಭತ್ತ ಬೆಳೆಗಾರ ರೈತ ಪತ್ರಿಕೆಗೆ ಮಾಹಿತಿ ನೀಡಿದರು.

> ಕೊಟ್ಟೂರು ಕೆರೆ 1889 ರಲ್ಲಿ ನಿರ್ಮಾಣವಾಗಿದ್ದು ಕೋಡಿ ಬಾಯಿ ಕಟ್ಟಿಯಲ್ಲಿ ರಂದ್ರವಾಗಿ ನೀರು ಪೋಲಾಗುತ್ತಿದೆ ಮತ್ತು ಕೆರೆ ನೀರು ಹೆಚ್ಚಾಗಿ ರಂದ್ರಗಳು ವಿಸ್ತಾರವಾದರೆ ಅನಾಹುತ ಸಂಭವಿಸಬಹುದು.ಈ ಬಗ್ಗೆ ಎನ್. ಎಸ್. ಭೋಸರಾಜು ಸಣ್ಣನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರೊಂದಿಗೆ ಮಾತನಾಡಿದೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದರು, ಶೀಘ್ರ ಸಂಬಂಧ ಪಟ್ಟ ಅಧಿಕಾರಿಗಳು ಈ ಬಗ್ಗೆ ಜಾಗೃತಿ ವಹಿಸಬೇಕು.
>
> – ಅಂಚೆ ಕೊಟ್ರೇಶ್," ನಮ್ಮ ಕೆರೆ ನಮ್ಮ ಹಕ್ಕು" ಹೋರಾಟಗಾರರು, ಕೊಟ್ಟೂರು.

ಚಿತ್ತ ಮಳೆಯ ಅರ್ಭಟಕ್ಕೆ ಕೊಟ್ಟೂರಿನ ಕೂಡ್ಲಿಗಿ ರಸ್ತೆ ಮಾರ್ಗದ ವಡ್ಡರಹಳ್ಳದ ನೀರು ಹೆಚ್ಚಾಗಿ ಸ್ವಲ್ಪ ಹೊತ್ತು ವಾಹನಗಳ ಓಡಾಟ ನಿಂತಿತ್ತು ಹಾಗೆ ಇಟಿಗಿ ಮಾರ್ಗ ರೈಲ್ವೆ ಬಿಡ್ಜ್ ಕೆಳಗೆ ರಸ್ತೆ ಸಂಪೂರ್ಣ 3 ಅಡಿಗೂ ಹೆಚ್ಚು ಜಲಾವೃತ್ತ ಮತ್ತು ಹರಪನಹಳ್ಳಿ ಮಾರ್ಗದ ರೈಲ್ವೆ ಬಿಡ್ಜ್ ಕೆಳಗೆ ರಸ್ತೆ ಕೂಡಾ ಜಲಾವೃತ್ತ ಮತ್ತು ಉಜ್ಜಯಿನಿ ಮಾರ್ಗ ಸನ್ನಿಧಿ ಕಾಲೇಜ್ ಸಮಿಪ ರಸ್ತೆ ಸಂಪೂರ್ಣ ಜಲಾವೃತ್ತವಾಗಿ ವಾಹನಗಳ ಓಡಾಟ ತೀವ್ರ ತೊಂದರೆಯುಂಟಾಗಿ, ಸವಾರರು ತಮ್ಮ ಪ್ರದೇಶಗಳಿಗೆ ತೆರಳಲು ಪರದಾಡುವಂತಾಗಿದೆ.



ಹೊಸಪೇಟೆಯ ತಳವಾರ ಕೇರಿ ರಾಂಪುರ ದುರುಗಮ್ಮ ದೇವಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಹಂಪಿ ಟೈಮ್ಸ್ HAMPI TIMES

## ಸ್ಟುಡೆಂಟ್ ಕಾಲಂ

### ನಮ್ಮ ಜೀವನಕ್ಕೆ ನಾವೇ ಹೊಣೆ



ಏಣಗಿ ಎಂಬ ಊರಿನಲ್ಲಿ ನಾಲ್ಕು ಗೆಳತಿಯರಿದ್ದರು. ಅವರ ಹೆಸರು ಮೀನಾ, ಶೀಲಾ, ಕವಿತಾ ಮತ್ತು ಸೀಮಾ. ಅವರು ಬಹಳ ಆಪ್ತರಾಗಿದ್ದರು. ನಾಲ್ಕೂ ಜನ ಪಿ.ಯು.ಸಿ ಪರೀಕ್ಷೆ ಬರೆದಿದ್ದರು. ಒಂದು ಸಲ ಸೀಮಾ 'ನಾವು ನಮ್ಮ ಉನ್ನತ ವ್ಯಾಸಂಗಕ್ಕಾಗಿ ನಗರಕ್ಕೆ ಹೋಗೋಣ' ಎಂದಳು. ಮೀನಾ ಮತ್ತು ಶೀಲಾ ಅದಕ್ಕೆ ಒಪ್ಪಿಕೊಂಡರು. ಆದರೆ ಕವಿತಾ ಒಪ್ಪಲಿಲ್ಲ. ಮೂವರು 'ನಮ್ಮ ಜೊತೆ ಬಾ' ಎಂದರು. ಆದರೆ ಕವಿತಾ 'ನಾ ಬರುವುದಿಲ್ಲಾ. ಬೇಕಿದ್ದರೆ ನೀವೇ ಹೋಗಿ ಬನ್ನಿ' ಎಂದಳು.

ಅವರು ಮೂವರು ತಮ್ಮ ಉನ್ನತ ವ್ಯಾಸಂಗಕ್ಕಾಗಿ ಕಾಶಿಗೆ ಹೋಗುತ್ತಾರೆ. ತಮ್ಮ ವ್ಯಾಸಂಗವನ್ನು ಮುಗಿಸಿಕೊಂಡು ಊರಿಗೆ ಮರಳಿದರು. ಊರಿಗೆ ಬಂದು ಕೆಲವು ದಿನಗಳ ನಂತರ ನಾಲ್ಕೂ ಜನ ಗೆಳತಿಯರು ಸೇರಿದರು. ತಮ್ಮ ಉನ್ನತ ವ್ಯಾಸಂಗದ ಸವಿನೆನಪುಗಳನ್ನು ಹಂಚಿಕೊಂಡರು. ನಂತರ ಅದರಲ್ಲಿ ಮೀನಾ 'ನಾವೂ ಮೂವರು ವ್ಯಾಸಂಗ ಮಾಡಿ ಬಂದಿದ್ದೇವೆ. ಸುಮ್ಮನೆ ಊರಲ್ಲಿ ಕುಳಿತು ಕಾಲ ಕಳೆಯುವ ಬದಲು ಕೆಲಸವನ್ನು ಹುಡುಕೋಣ' ಎಂದಳು. ಅದಕ್ಕೆ ಶೀಲಾ ಮತ್ತು ಸೀಮಾ ಒಪ್ಪಿದರು. ಆಗ ಕವಿತಾ 'ನಾನು ನಿಮ್ಮ ಜೊತೆ ಬರುತ್ತೇನೆ' ಎಂದಳು.

'ನಮ್ಮ ಜೊತೆ ಓದಲು ಬರಲಿಲ್ಲ! ನಿನಗೆ ಹೇಗೆ ಕಲಸ ಸಿಗುತ್ತದೆ?' ಎಂದರು ಮೂವರು. ಆಗ ಕವಿತಾಳು 'ನನ್ನ ಓದಿಗಿಂತ ನನ್ನ ಬುದ್ಧಿಯಿಂದ ನಾನು ಕೆಲಸ ಪಡೆಯಬಹುದು' ಎಂದಳು. 'ಓಹೋ ನೀನು ಅಷ್ಟೊಂದು ಬುದ್ದಿವಂತೆಯಾ!. ಸರಿ ಬಾ ಹೋಗೋಣ. ನಿನ್ನ ಬುದ್ಧಿವಂತಿಕೆ ಎಷ್ಟಿದೆ ಎಂಬುದು ಗೊತ್ತಾಗುತ್ತದೆ' ಎಂದು ಅವಳನ್ನು ತಮ್ಮ ಜೊತೆ ಕರೆದೊಯ್ದರು.

ತಮ್ಮ ಊರು ಬಿಟ್ಟು ಪಟ್ಟಣಕ್ಕೆ ಹೋಗಬೇಕಾದರೆ ಅವರು ಒಂದು ಕಾಡನ್ನು ದಾಟಿಕೊಂಡು ಹೋಗಬೇಕಿತ್ತು. ಆಗ ಕಾಡಿನಲ್ಲಿ ಒಂದು ಹುಲಿಯ ಅಸ್ತಿಪಂಜರ ಕಂಡಿತು. ಅದನ್ನು ನೋಡಿದ ಮೀನಾ, ಶೀಲಾ ಮತ್ತು ಸೀಮಾ ಅವರು 'ನಮ್ಮ ಜ್ಞಾನ, ಶಕ್ತಿ ಹಾಗೂ ಸಾಮರ್ಥ್ಯದಿಂದ ಅದನ್ನು ಮತ್ತೆ ಜೀವಂತ ಮಾಡಬಹುದು' ಎಂದರು. ಆಗ ಕವಿತಾಳು 'ಬೇಡ, ಅದು ಜೀವಂತವಾದರೆ ನಮ್ಮನ್ನು ಉಳಿಸುವುದಿಲ್ಲ' ಎಂದಳು. ಆದರೆ ಮೂವರು ಅವಳ ಮಾತನ್ನು ಕೇಳಲಿಲ್ಲ. ಅದನ್ನು ಬದುಕಿಸಿಯೇ ತೀರುತ್ತೇವೆ ಎಂದು ಅಸ್ಥಿಪಂಜರದತ್ತ ಹೊರಟರು. ಕೂಡಲೇ ಕವಿತ ಪಕ್ಕದಲ್ಲಿದ್ದ ಮರ ಹತ್ತಿ ಅಲ್ಲಿ ಕುಳಿತುಕೊಂಡಳು.

ಮೀನಾ ಹುಲಿಯ ಮೂಳೆಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿದಳು. ಶೀಲಾ ಹರಿದ ಆ ಹುಲಿಯ ಚರ್ಮವನ್ನು ಸರಿಪಡಿಸಿದಳು. ಸೀಮಾ ಆ ಹುಲಿಗೆ ಜೀವ ನೀಡಿದಳು. ತುಂಬಾ ದಿನಗಳಿಂದ ಆಹಾರವಿಲ್ಲದೇ ಸಾವನ್ನಪ್ಪಿದ್ದ ಹುಲಿ ಜೀವ ಪಡೆದುಕೊಂಡ ನಂತರ ಮೂವರನ್ನು ಕೊಂದು ತಿಂದಿತು. ಮೂವರನ್ನು ತಿಂದು ತೇಗಿದ ಹುಲಿ ಅಲ್ಲಿಂದ ಕಾಡಿನೊಳಗೆ ಹೋಯಿತು. ಹುಲಿ ಅತ್ತ ಹೋದ ಮೇಲೆ ಕವಿತಾಳು ಮರವನ್ನು ಇಳಿದು ಬರುತ್ತಾಳೆ. ಮೂವರು ನನ್ನ ಮಾತು ಕೇಳಿದ್ದರೆ ಜೀವಂತವಾಗಿರಬಹುದಿತ್ತು. ನನ್ನ ಮಾತು ಕೇಳದೇ ತಮ್ಮ ಜೀವವನ್ನು ತಾವೇ ಕಳೆದುಕೊಂಡರು ಎಂದುಕೊಳ್ಳುತ್ತಾ ಊರಿನ ಹಾದಿ ಹಿಡಿದಳು. ನಮ್ಮ ಜೀವನವನ್ನು ನಾವೇ ಹಾಳು ಮಾಡಿಕೊಳ್ಳುವುದು ಹೀಗೆ ಅಲ್ಲವೇ?

– **ಆರ್. ಕೌಸರ್.** 10ನೇ ತರಗತಿ.
ಸರ್ಕಾರಿ ಪ್ರೌಢಶಾಲೆ. ಬಸರಕೋಡು. ಹಗರಿಬೊಮ್ಮನಹಳ್ಳಿ(ತಾ)

# ಭಯ, ಅನುಮಾನವೇ ಮುಪ್ಪು-ಎಚ್ಚರಿಕೆ ಭರವಸೆಯೇ ಯೌವ್ವನ...

ಬದುಕಿನಲ್ಲಿ ನಾವಂದುಕೊಂಡಂತೆ ಎಲ್ಲವೂ ನಡೆಯುವುದಿಲ್ಲ. ನಮ್ಮ ಯೋಗ್ಯತೆಗೆ ತಕ್ಕುದಾದುದು ಸಿಕ್ಕೇ ಸಿಗುತ್ತದೆ. ನಮಗೆ ಕಡಿಮೆ ಸಿಕ್ಕಿದೆಯೆಂದರೆ ನಾವೂ ಅಷ್ಟಕ್ಕೇ ಲಾಯಕ್ಕೆಂದರ್ಥ. ಅದು ವಸ್ತು ಅಥವಾ ಆರೋಗ್ಯದ ವಿಚಾರವಾಗಿರಬಹುದು. ಮನುಷ್ಯ ಒಂದು ಬಗೆದರೆ ದೈವವೊಂದು ಬಗೆದಂತೆ ನಾವು ಎಷ್ಟೇ ಕಾಳಜಿ ವಹಿಸಿದರೂ ಕೆಲವೊಮ್ಮೆ ಆರೋಗ್ಯದಲ್ಲಿ ಏರುಪೇರಾಗುವುದು ಅಥವಾ ವಯೋಸಹಜ ಕಾಯಿಲೆಗಳು ಬರುವುದು, ಹೋಗುವುದು ಸಹಜ. ಈ ಸಂದರ್ಭದಲ್ಲಿ ಭಯಗೊಳ್ಳುವುದು ಬೇಡ. ಮುಂಜಾಗ್ರತೆ ಇರಬೇಕು. ಕಳೆದ ಕರೋನ ಸಂದರ್ಭದಲ್ಲಿ ಸಾವಿರಾರು ಜನರು ಭಯ, ಆತಂಕದಿಂದ ಆರೋಗ್ಯ ಕಾಪಾಡಿ ಕೊಳ್ಳುವಲ್ಲಿ ಹಿಂಜರಿದು ಅಂತ್ಯ ಕಂಡವರಿದ್ದಾರೆ. ಆದರೆ ಎಚ್ಚರಿಕೆ, ಭರವಸೆಯೊಡನೆ ಸ್ನೇಹ ವಿಟ್ಟುಕೊಂಡವರು ಅದರಿಂದ ಗೆದ್ದು ಬಂದವರಿದ್ದಾರೆ. ಧೈರ್ಯಂ ಸರ್ವತ್ರ ಸಾಧನಂ.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Scan For Digital Colourful
HAMPI TIMES E-paper

ಕೆಲವು ವೈದ್ಯರು ರೋಗಿಗೆ ಆರೋಗ್ಯದಲ್ಲಿ ಭರವಸೆ ನೀಡಿ ಸಮಾಧಾನದಿಂದ ಮಾತಾಡಿ ಈ ಕುರಿತು ಚಿಂತೆಯ ಅಗತ್ಯವಿಲ್ಲವೆಂದು ಹೇಳಿ ಧೈರ್ಯ ತುಂಬುತ್ತಾರೆ. ಅಂಥವರು ನಿಜವಾಗಿಯೂ ವೈದ್ಯೋ ನಾರಾಯಣಾ ಹರಿ. ಇನ್ನು ಕೆಲವರು ರೋಗ ಒಂದು ಪಾಲಿದ್ದರೆ ರೋಗಿಯನ್ನು ಹೆದುರಿಸಿ ಇನ್ನಷ್ಟು ಚಿಂತೆಗೀಡು ಮಾಡುವವರಿದ್ದಾರೆ. ಅಂಥವರು ನಿಜವಾಗಿ ಪ್ರತ್ಯಕ್ಷ ಯಮಧರ್ಮನೇ ಸರಿ. ಆದರೂ ಎಲ್ಲವೂ ಹಣೆಬರಹವೆಂದು ಕೂರುವುದು ಸರಿಯಲ್ಲ. ಹಣೆಬರಹವನ್ನು ನಮ್ಮ ಕೈಗೆ ತೆಗೆದುಕೊಂಡು ಅದನ್ನೇ ಬದಲಾಯಿಸಲೆತ್ನಿಸಬೇಕು.

ಭಯ ನಮ್ಮ ಅತಿ ದೊಡ್ಡ ಶತ್ರು. ಇದನ್ನು ಮೆಟ್ಟಿ ನಿಲ್ಲಬೇಕು. ಇದು ಯಾವತ್ತೂ ಶಾಶ್ವತವಲ್ಲವೆಂಬ ಭರವಸೆಯನ್ನು ಸಂತಸ-ದುಃಖದಲ್ಲಿ ನೆನಪಿಸಿಕೊಳ್ಳಬೇಕು. ಪರಿಸ್ಥಿತಿ ನಿಭಾಯಿಸುವಾಗ ಬುದ್ಧಿ ತಣ್ಣಗಿರಲಿ, ಜನರೊಂದಿಗೆ ಸ್ಪಂದಿಸುವಾಗ ಹೃದಯ ಬೆಚ್ಚಗಿರಲಿ. ಕೊಂಬೆಯ ಮೇಲೆ ಕುಳಿತ ಪಕ್ಷಿ ಕೊಂಬೆ ಅಲುಗಾಡಿದರೂ ಅಥವಾ ಮುರಿದು ಬಿದ್ದರೂ ಹೆದರುವುದಿಲ್ಲ. ಏಕೆಂದರೆ ಅದು ತನ್ನ ರೆಕ್ಕೆಗಳನ್ನು ನಂಬಿರುತ್ತದೆಯೇ ಹೊರತು ಕೊಂಬೆಯನ್ನಲ್ಲ. ಅನೇಕ ಸಂದರ್ಭದಲ್ಲಿ ಕೆಲಸಕ್ಕೆಂದು ಕೈ ಹಾಕಿದಾಗ ಹಲವಾರು ಸಮಸ್ಯೆಗಳು ಎದುರಾಗುತ್ತವೆ. ಅವುಗಳತ್ತ ಹೆಚ್ಚು ಗಮನ ನೀಡುವುದಕ್ಕಿಂತ ಪರಿಹರಿಸುವ ಸಾಧ್ಯತೆಗಳ ಬಗೆಗೆ ಯೋಚಿಸಿದಾಗ ಹೆಚ್ಚು ಹೆಚ್ಚು ಅವಕಾಶಗಳು ತೆರೆದುಕೊಳ್ಳುತ್ತವೆ. ಅಂದರೆ ಸಮಸ್ಯೆಗಳು ನಮ್ಮನ್ನು ಅಶಕ್ತರನ್ನಾಗಿ ಮಾಡುವುದಿಲ್ಲ. ಸಮಸ್ಯೆಗಳನ್ನು ಸರಿಯಾಗಿ ನಿಭಾಯಿಸಿದರೆ ನಾವು ಇನ್ನಷ್ಟು ಬಲಿಷ್ಠರಾಗುತ್ತೇವೆ. ನಕಾರಾತ್ಮಕವಾಗಿ (ಭಯ-ಅನುಮಾನದಲ್ಲಿ) ಯೋಚಿಸಿದರೆ ಪ್ರತಿ ಅವಕಾಶದಲ್ಲೂ ಕಷ್ಟವೇ ಎದುರಾಗುತ್ತದೆ. ಸಕಾರಾತ್ಮಕವಾಗಿ (ಎಚ್ಚರಿಕೆ-ಭರವಸೆಯಲ್ಲಿ) ಯೋಚಿಸಿದರೆ ಪ್ರತಿ ಕಷ್ಟವೂ ಅವಕಾಶವಾಗಿ ಪರಿಣಮಿಸುತ್ತದೆ.

ಪ್ರತಿದಿನವೂ ಹೊಸ ನಿರೀಕ್ಷೆಯೊಂದಿಗೆ ಪ್ರಾರಂಭವಾದರೂ ಹೊಸ ಅನುಭವಗಳು ಉಂಟಾಗುತ್ತವೆ. ಆದ್ದರಿಂದ ಜೀವನದ ಪ್ರತಿ ಕ್ಷಣವನ್ನು ಅಸ್ವಾದಿಸಬೇಕು. ಪ್ರತಿ ಸಂದರ್ಭಗಳು ಹೊಸ ಪಾಠವನ್ನು ಕಲಿಸಿಕೊಡುತ್ತವೆ. ಪಲಾಯನ ಬೇಡ, ಪಾಲ್ಗೊಳ್ಳುವ ಚಿಂತನೆ ಅಗತ್ಯ.



ಇದು ಪೈಪೋಟಿ ಯುಗ. ಎಲ್ಲರೂ ಯಶಸ್ಸು ಮತ್ತು ಸ್ಥಾನಮಾನಕ್ಕೆ ಹೋರಾಟ ಮಾಡುತ್ತಿರುತ್ತಾರೆ. ನಾವು ಸ್ವಲ್ಪ ಭಯಗೊಂಡರೆ, ಆಲಸಿಯಾದರೆ ಪ್ರತಿಸ್ಪರ್ಧಿಗಳು ನಮ್ಮ ಸ್ಥಾನ ಆಕ್ರಮಿಸಬಹುದು. ದಿನವೂ ಎಚ್ಚರಿಕೆ-ಭರವಸೆಯೊಂದಿಗೆ ಮುನ್ನುಗ್ಗಿದಾಗ ಕಾರ್ಯಸಿದ್ಧಿ ಕೈಗೂಡುತ್ತದೆ. ನಂಬಿಕೆ ಸದಾ ಎಚ್ಚರದಲ್ಲಿದ್ದಾಗ ಯಾವುದೇ ಸಾಹಸಕ್ಕೆ ಕೈಹಾಕಬಹುದು. ಸ್ವಲ್ಪವೂ ಭಯವಾಗುವುದಿಲ್ಲ. ಸ್ವಲ್ಪ ಅನುಮಾನ, ಅವಿಶ್ವಾಸವಿದ್ದರೆ ಮನಸ್ಸು ಅಳುಕುತ್ತದೆ. ಮೊದಲು ನಮ್ಮ ಮೇಲೆ ನಮಗೆ ಭರವಸೆಯಿರಲಿ. ಮುಖ ಬದಲಾಯಿಸುವುದರಿಂದ ಏನೂ ಲಾಭವಿಲ್ಲ. ಬದಲಾವಣೆಯತ್ತ ಮುಖ ಮಾಡುವುದರಿಂದ ಏನನ್ನಾದರೂ ಸಾಧಿಸಬಹುದು.

ಒಟ್ಟಾರೆ ಭಯದಲ್ಲಿದ್ದರೆ ನಮ್ಮ ಮೊಗದಲ್ಲಿ ವಿಕಾರ ಪ್ರದರ್ಶನವಾಗುತ್ತದೆ. ಭರವಸೆಯಲ್ಲಿದ್ದರೆ ನಮ್ಮ ಮೊಗದಲ್ಲಿ ಆಕಾರ ಪ್ರಕಟವಾಗುತ್ತದೆ. ಆಯ್ಕೆ ನಮ್ಮ ಕೈಯ್ಯಲ್ಲಿದೆ.

# ಮರೆಯಾಗುತ್ತಿರುವ ಮಾನವೀಯ ಮೌಲ್ಯಗಳು

**ದಾರಿಯಲ್ಲಿ ಹಸಿದ ಅಜ್ಜಿಯೊಂದು ಕೈಯೊಡ್ಡಿದಾಗ ಅವಳಿಗೆ ನೀಡಲು ನೋಟುಗಳ ಕಂತೆಯನ್ನು ಸರಿಸಿ ಒಂದು ರೂಪಾಯಿ ನಾಣ್ಯಕ್ಕಾಗಿ ನಮ್ಮ ಜೇಬನ್ನು ತಡಕಾಡುತ್ತೇವೆ. ಹಾಗಾದರೆ ಎತ್ತ ಸಾಗುತ್ತಿದೆ ನಮ್ಮ ತಂತ್ರಜ್ಞಾನದ ಬೆಳವಣಿಗೆ, ಎಲ್ಲಿ ಹೋಯಿತು ನಮ್ಮ ಮಾನವೀಯ ಕಳಕಳಿ, ಎಲ್ಲಿ ಅಡಗಿ ಕುಳಿತಿವಿ ನಮ್ಮ ಮಾನವೀಯ ಮೌಲ್ಯಗಳು. ಎಲ್ಲಿ ಎಡುವುತಿದ್ದೇವೆ ನಾವು ಎಂದರೆ ಮತ್ತದೇ ನಮ್ಮ ಶಿಕ್ಷಣದ ಕಡೆಗೆ ಬೆರಳು ತೋರಿಸುತ್ತೇವೆ.**

ಜಗತ್ತಿನ ಉಗಮ, ಮಾನವನ ವಿಕಾಸ ಮತ್ತು ವಾಸ್ತವದ ವೈಭವಪ್ರೇರಿತ ಜೀವನ ಶೈಲಿಯ ಮೂಲ ತಳಹದಿ ಮನುಷ್ಯನ ಕುತೂಹಲ ಮತ್ತು ಸಂಶೋಧನಾ ಪ್ರವೃತ್ತಿ ಎಂದರೆ ತಪ್ಪಾಗಲಾರದು. ಜೀವಜಗತ್ತಿನ ವಿಕಾಸ ಸಿದ್ಧಾಂತವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಸ್ಪಷ್ಟವಾಗಿ ಗೋಚರಿಸುವ ಅಂಶವೆಂದರೆ, ಮಾನವನ ವಿಕಾಸದ ವಿವಿಧ ಹಂತಗಳಲ್ಲಿ ಉಂಟಾದಂತಹ ಮಹತ್ತರ ಶೋಧನೆಗಳು ಅವನನ್ನು ಇಂದು ಜೀವ ಸಂಕುಲದಲ್ಲೇ ವಿಶಿಷ್ಟ ಮತ್ತು ಬುದ್ದಿವಂತ ಎನ್ನುವ ಹಣೆಪಟ್ಟಿಯನ್ನು ಕಟ್ಟಿ ನಾವಿಂದ ನೋಡುವ ಈ ವಾಸ್ತವಿಕ ವೈಭವಪೂರಿತ ಜಗತ್ತಿಗೆ ಕಾರಣವಾಗಿದೆ.

ಕಾಡು ಕಲ್ಲಿನಿಂದ ಸೃಷ್ಟಿಸಿದ ಬೆಂಕಿಯಿಂದ ಹಿಡಿದು, ವಿವಿಧ ಕಲ್ಲಿನ ಆಯುಧಗಳಿಂದ ಮೊದಲಾಗಿ ನೀರೆತ್ತುವ ಚಕ್ರದಿಂದ ಹಿಡಿದು ಓಡಡುವ ವಾಹನ, ಹಾರುವ ವಿಮಾನ, ಮುಳುಗುವ ಸಬ್ ಮರೈನ್ ಗಳ ವರೆಗೆ, ಮದ್ದು ಗುಂಡು, ಮೊಬೈಲ್ ಗೆಜೆಟ್ ಗಳಿಂದ ಹಿಡಿದು ಅಣು ಪರಮಾಣು, ಗ್ರಹ ಉಪಗ್ರಹಗಳಂತಹ ಕ್ಲಿಷ್ಟ ಮತ್ತು ಸಂಕೀರ್ಣವಾದ ಜ್ಞಾನವನ್ನು ತನ್ನ ಕೈವಶ ಮಾಡಿಕೊಂಡು ಭೂಮಿಯ ಆಳ ಮತ್ತು ಆಕಾಶದ ಅನಂತದವರೆಗೆ ತನ್ನ ಕಬಂಧ ಭಾಹುಗಳನ್ನು ಚಾಚುವಲ್ಲಿ ಯಶಸ್ವಿಯಾಗಿದ್ದಾನೆ.

ಇವೆಲ್ಲವುಗಳ ಉದ್ದೇಶ ಮಾನವ ಕಲ್ಯಾಣ. ಆದರೆ ಅದು ಈಡೇರಿದಿಯೇ ಎಂದು ಒಮ್ಮೆ ನೋಡಿದರೆ, ಮಾನವ ಜನಾಂಗ ತಲೆ ತಗ್ಗಿಸಿ ನಿಲ್ಲಬೇಕಾಗುತ್ತದೆ. ಎಲ್ಲಿ ನೋಡಿದರೆ ಅಲ್ಲಿ ಕೊಲೆ ಸುಲಿಗೆ, ಅತ್ಯಾಚಾರ, ಅಪಹರಣ, ಯುದ್ದ, ಮಾನವ ಕಳ್ಳ ಸಾಗಣಿಕೆ, ಹಿಂಸೆ, ಅಸಮದಾನ ಹೊತ್ತಿ ಹುರಿಯುತ್ತದೆ. ಒಂದು ಕಡೆ ತಂತ್ರಜ್ಞಾನದ ಅಭಿವೃದ್ದಿಯನ್ನು ಕಂಡು ಹೆಮ್ಮೆ ಪಡಬೇಕೊ ಅಥವಾ ಮಾನವೀಯ ಮೌಲ್ಯಗಳಲ್ಲಿನ ಕೊರತೆಯನ್ನು ಕಂಡು ದುಃಖ ಪಡಬೇಕೊ ತಿಳಿಯದಂತಾಗಿದೆ.

ಪ್ರಗತಿಯ ಹಾದಿಯಲ್ಲಿನ ಓಟದಲ್ಲಿ ಮನುಷ್ಯ ತನ್ನ ತನವನ್ನು, ತನ್ನವರನ್ನು, ಮಾನವೀಯ ಮೂಲ ತತ್ವವನ್ನು, ಮನುಷ್ಯತ್ವದ ಆದಾರ ಸ್ತಂಭವನ್ನು ಮರೆತು ಓಡುತ್ತಿದ್ದಾನೆ. ಕೊನೆ ಕೊನೆಗೆ ತನ್ನ ಜೀವನ ಪಥದ ಗುರಿ ಉದ್ದೇಶಗಳನ್ನೇ ಮರೆತಂತೆ ಓಡುತ್ತಿದ್ದಾನೆ. ಅವನ ಈ ಓಟದ ಅಂತಿಮ ಗುರಿ ದುಃಖವೇ ಆಗಿದೆ ಎನ್ನುವುದನ್ನು ಮನಗಾಣಲು ವಿಫಲವಾಗುತ್ತಿದ್ದಾನೆ.

ಮಾನವ ಕಲ್ಯಾಣಕ್ಕಾಗಿ ಇಪ್ಪತ್ತೊಂದನೆ ಶತಮಾನದ ಆದಿಯಾಗಿ ಸದ್ಯದ ಅವಶ್ಯ ಮತ್ತು ಅನಿವಾರ್ಯ ಹಾಗು ಪ್ರತಿಯೊಬ್ಬ ಮನುಷ್ಯ ಮತ್ತು ಪ್ರತಿಯೊಂದು ದೇಶ ಹೊಂದಿರಲೇ ಬೇಕಾದಂತಹ ಅವಶ್ಯ ಜ್ಞಾನವಾದ "ಉತ್ಕೃಷ್ಠ ಮಾನವ ಸಂಪನ್ಮೂಲದ" ಬೆಳವಣಿಗೆ ಮತ್ತು ಅದನ್ನು ಕಾಯ್ದುಕೊಳ್ಳುವಿಕೆ ಹಾಗೆಯೆ ಮುಂದಿನ ಪೀಳಿಗೆಗೆ ವರ್ಗಾವಣೆ ಮಾಡುವುದೇ ಆಗಿದೆ ಎಂದರೆ ತಪ್ಪಿಲ್ಲ. ಈ ಸಂಪತ್ತುನ್ನು ಬೆಳೆಸುವ ಮತ್ತು ಅಬಿವೃದ್ದಿಗೊಳಿಸುವ ದಾರಿಗಳನ್ನು ಅರಿತು ಅದನ್ನು ಮಾನವ ಕಲ್ಯಾಣಕ್ಕಾಗಿ ಪುನಃ ಪುನಃ ಬಳಸುವುದನ್ನೂ ಅದಕ್ಕೆ ಬೇಕಾದ ಬದ್ದತೆಯನ್ನು ಕರಗತಮಾಡಿಕೊಳ್ಳು ಅನಿವಾರ್ಯತೆ ಮತ್ತು ಅತಿ ಅವಶ್ಯಕತೆ ಸದ್ಯದ ಆಧುನಿಕ ಪ್ರಪಂಚದ ಮುಂದಿರುವ ಬಹುದೊಡ್ಡ ಸವಾಲಾಗಿದೆ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper



ಕೃತಕ ಬುದ್ದಿಮತ್ತೆಯಂತಹ ಭಾವನಾರಹಿತವಾದ ಯಾಂತ್ರಿಕ ಜಗತ್ತಿನಲ್ಲಿ ಬದುಕು ರಸಹೀನ ವಾಗುತ್ತಿರುವ ಈ ಸಂದರ್ಭದಲ್ಲಿ ಮತ್ತೆ ಮಾನವೀಯ ಸಂಬಂಧಗಳನ್ನು ಬೆಸೆದು ಬದುಕು ಹಸನಾಗುವಂತೆ ಮಾಡಲು, ಯಾಂತ್ರಿಕತೆ ಮತ್ತು ತಂತ್ರಜ್ಞಾನದ ಬೆಳವಣಿಗೆಯ ಜೊತೆ ಜೊತೆಗೆ ಮಾನವೀಕ ಸಂಪನ್ಮೂಲದ ಬೆಳವಣಿಗೆಯಲ್ಲಿ ಅಮೂಲಾಗ್ರ ಬದಲಾವಣೆಗಳು ಇಂದಿನ ಅತೀ ಅವಶ್ಯಕ ಮತ್ತು ಅನಿವಾರ್ಯ ಅಗತ್ಯವಾಗಿದೆ.

ನಮ್ಮ ದೈನಂದಿನ ಜೀವನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಆಗಮನವು ನಮ್ಮ ಜೀವನವನ್ನು ಸರಳ ಮತ್ತು ಆಸಕ್ತಿದಾಯಕವಾಗಿಸಿದೆ. ಅದರಲ್ಲೂ ವಿಶೇಷವಾಗಿ ತಂತ್ರಜ್ಞಾನದ ಉಪಯೋಗ ತಿಳಿದಾಗಿನಿಂದ ಲಂತೂ ಮಾನವನ ಬೆಳವಣಿಗೆಯ ವೇಗಕ್ಕೆ ಮತ್ತೊಂದು ಗರಿ ಬಂದಂತಾಗಿದೆ ಎಂದರೆ ತಪ್ಪಿಲ್ಲ. ಆದಿ ಮಾನವನಿಂದ ನಾವು ನೋಡುತ್ತಿರುವ ಮಾನವನ ಪ್ರಗತಿ ಮತ್ತು ವರ್ತಮಾನದ ಈ ಆಧುನಿಕ ಮನುಷ್ಯನವರೆಗೆ ಜೀವನ ನಡೆಸುವ ಪದ್ಧತಿಯನ್ನು ಗಮನಿಸಿದರೆ ವಿಜ್ಞಾನದ ಅದರಲ್ಲೂ ಯಾಂತ್ರಿಕ/ತಂತ್ರ ವಿಜ್ಞಾನದ ಕೊಡುಗೆ ಅಪಾರ.

ಇಂದು ಮನುಷ್ಯ ಚಂದ್ರನಲ್ಲಿ, ಮಂಗಳನಲ್ಲಿ ನೆಲೆಸುವ ಹಂತಕ್ಕೆ ಸಾಗುತ್ತಿದ್ದಾನೆ ಎಂದರೆ ಅದರಲ್ಲಿ ತಂತ್ರಜ್ಞಾನದ ಪಾತ್ರವನ್ನು ಅಲ್ಲಗಳಿಯುವಂತಿಲ್ಲ. ಇಂದು ಮಾನವ ಮಂಗಳನಲ್ಲಿ ಮನೆಯನ್ನು ಹೊಂದುವ ವಿಚಾರ ಮಾಡುವ ಹೊಸ್ತಿಲಿನಲ್ಲಿರುವ ನಾವು ನಮ್ಮ ನೆರಮನೆಯವರನ್ನು ಮರೆಯುತ್ತಿದ್ದೇವೆ, ಸಾವಿರಾರು ಕೋಟಿ ಹಣ ತಂತಜ್ಞಾನದ ಅಭಿವೃದ್ದಿಗೆ ವಿನಿಯೋಗಿಸುತ್ತಿರುವ ನಾವು, ದಾರಿಯಲ್ಲಿ ಹಸಿದ ಅಜ್ಜಿಯೊಂದು ಕೈಯೊಡ್ಡಿದಾಗ ಅವಳಿಗೆ ನೀಡಲು ನೋಟುಗಳ ಕಂತೆಯನ್ನು ಸರಿಸಿ ಒಂದು ರೂಪಾಯಿ ನಾಣ್ಯಕ್ಕಾಗಿ ನಮ್ಮ ಜೇಬನ್ನು ತಡಕಾಡುತ್ತೇವೆ.

ಹಾಗಾದರೆ ಎತ್ತ ಸಾಗುತ್ತಿದೆ ನಮ್ಮ ತಂತ್ರಜ್ಞಾನದ ಬೆಳವಣಿಗೆ, ಎಲ್ಲಿ ಹೋಯಿತು ನಮ್ಮ ಮಾನವೀಯ ಕಳಕಳಿ, ಎಲ್ಲಿ ಅಡಗಿ ಕುಳಿತಿವಿ ನಮ್ಮ ಮಾನವೀಯ ಮೌಲ್ಯಗಳು. ಎಲ್ಲಿ ಎಡುವುತಿದ್ದೇವೆ ನಾವು ಎಂದರೆ ಮತ್ತದೇ ನಮ್ಮ ಶಿಕ್ಷಣದ ಕಡೆಗೆ ಬೆರಳು ತೋರಿಸುತ್ತೇವೆ. ಇದೇನಾ ನಾವು ನಮ್ಮ ಶಿಕ್ಷಣದಿಂದ ಕಲಿಯುತ್ತಿರುವುದು? ಇದನ್ನೇನಾ ನಮ್ಮ ಪಠ್ಯಕ್ರಮ ನಮಗೆ ಕಲಿಸಿತ್ತಿರುವುದು. ಅಂತಿಮವಾಗಿ ನಮ್ಮ ಶಿಕ್ಷಣದ ಗುರಿ ಉದ್ದೇಶಗಳು ಏನನ್ನು ಸಾಧಿಸ ಹೊರಟಿವೆ?. ಇದೊಂದು ದೊಡ್ಡ ಸವಾಲಾಗಿ ನಿಂತಿದೆ.

ಮಾಲ್ಯರಹಿತ ತಂತ್ರಜ್ಞಾನ ಅತ್ಯಂತ ಅಪಾಯಕಾರಿ ಎನ್ನುವುದನ್ನು ನಾವಾರು ಮರೆಯಬಾರದು ಹಾಗೆಯೆ ಅಂತಹ ಮೌಲ್ಯಗಳು ನಮ್ಮಲ್ಲಿ ಬರಬೇಕಾದರೆ ಅದು ನಾವಂದುಕೊಂಡಷ್ಟು ಸರಳವು ಅಲ್ಲ ಮತ್ತು ಸಹಜವೂ ಅಲ್ಲ. ಅದಕ್ಕಾಗಿ ಸುದೀರ್ಘವಾದ ಸಾಮೂಹಿಕ ಶ್ರಮ ಬೇಕಾಗುತ್ತದೆ. ಅಂದರೆ ಇದರ ಆರಂಭಿಕ ಹೂಡಿಕೆಯ ವೆಚ್ಚಗಳು ಬಹಳ ಗಣನೀಯವಾಗಿರುತ್ತವೆ ಮತ್ತು ಇವುಗಳ ನಿರ್ಮಾಣಕ್ಕೆ ಬೇಕಾದ ಸಮಯವು ಸಹ ಗಣನೀಯವಾಗಿರುತ್ತದೆ. ಅದಕ್ಕಾಗಿ, ಮಾನವೀಯ ಮೌಲ್ಯಗಳು ಸಹ ಪಠ್ಯಕ್ರಮದ ಭಾಗವಾಗಬೇಕು, ಯಾವ ದೇಶದಲ್ಲಿ ಮೌಲ್ಯಯುತ ಮಾನವ ಸಂಪತ್ತು ಇದೆಯೂ ಅ ದೇಶ ಮಾತ್ರ ಬಹುಕಾಲ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯ. ಕೌಶಲ್ಯದ ಜೊತೆ ಜೊತೆಗೆ ಮಾನವೀಯ ಮೌಲ್ಯಗಳು ಬೆರೆತರೆ ಮಾತ್ರ ಮಾನವ ಕಲ್ಯಾಣ ಸಾಧ್ಯವಾಗುತ್ತದೆ. ಅಭಿವೃದ್ಧಿಗೆ ತಂತ್ರಜ್ಞಾನದ ಸಹಕಾರ, ಮೌಲ್ಯಗಳ ತಳಹದಿಯೊಂದಿಗೆ, ಸರ್ವರ ಭಾಗವಹಿಸುವಿಕೆಯನ್ನು ಪ್ರೂತ್ಸಾಹಿಸುವಂತಿದ್ದರೆ ಸರ್ವಶ್ರೇಷ್ಠ, ಸಂವೃದ್ದ ದೇಶವನ್ನು ಕಟ್ಟಬಹುದಾಗಿದೆ. ಮನ ಮನಗಳಲ್ಲಿ, ಮನೆ ಮನೆಗಳಲ್ಲಿ ಸವಯುತ್ತಿರುವ ಮಾನವೀಯ ಮೌಲ್ಯಗಳ ಸವಕಳಿಯನ್ನು ತಡೆದು ನಮ್ಮ ಮುಂದಿನ ಪೀಳಿಗೆಯ ಬದುಕನ್ನು ಬಂಗಾರವಾಗಿಸೋಣ. ಎಲ್ಲಾ ಓದುಗ ಪ್ರಭುಗಳಿಗೂ ವಿಜಯ ದಶಮಿಯ ಶುಭಾಶಯಗಳು.

## ನೀವೂ ಬರೆಯಬಹುದು

ಹಂಪಿ **ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

**ಕವಿ ಮನಸು**

## ದ ಗುಣಿತಾಕ್ಷರದ ಕವನ

ದ ಯೆಯ ತೋರಿ ಕಾಪಾಡು ಜಗದಾಂಬಿಕೆ
ದಾ ರಿಯ ತೋರುತ ಹರಸಮ್ಮ ಮೂಕಾಂಬಿಕೆ
ದಿ ನನಿತ್ಯ ಶಿರಬಾಗುವೆನು ನಿನ್ನಯ ಪಾದಕೆ
ದೀ ನಳಾಗಿ ವಂದಿಸುವೆ ತಾಯಿಯ ಚರಣಕೆ
ದು ರಿತಗಳ ಕಳೆಯುತ ಸಲಹಮ್ಮ ತಾಯೇ
ದೂ ರ್ತರ ಅಟ್ಟಹಾಸವ ಅಡಗಿಸಮ್ಮ ಕಾಯೇ
ದೃ ಢ ಭಕ್ತಿಯಿಂದ ಬೇಡುವೆನು ನಿನ್ನ
ದೆ ಸೆಯನ್ನೇ ಬದಲಿಸುತ ರಕ್ಷಿಸು ಎನ್ನ
ದೇ ವಿಯ ಪೂಜಿಸಲು ಅನುದಿನವೂ
ಸಂತೋಷವು
ದೈ ವ ಕೃಪೆಯಿರಲು ಬಾಳು ಸುಂದರವು
ದೊ ರಕುವುದು ನಿಷ್ಕಲ್ಮಶ ಭಕ್ತಿಗೆ ಪ್ರತಿಫಲವು
ದೋ ಷವನು ಕಳೆದು ಸಕಲವನು ಕರುಣಿಸು
ಸಿದ್ದಿಧಾತ್ರಿ ದೇವಿಯೇ
ದೌ ರ್ಜನ್ಯ ಎಸಗುವವರ ಕಠಿಣವಾಗಿ
ಶಿಕ್ಷಿಸುವಳು ಜಗನ್ಮಾತೆಯೇ
ದಂ ಡಿಸುತ ತಿದ್ದಿ ಬುದ್ದಿಯ ಭಕ್ತರಿಗೆ
ಕರುಣಿಸುವಾತೆ
ದುಃ ಖದಲ್ಲಿ ನಿನ್ನಯ ಸ್ಮರಣೆ ಶಕ್ತಿ ದಾತೆ

– **ಚೇತನ ಭಾರ್ಗವ,** ಬೆಂಗಳೂರು

## ಶಿಷ್ಟರ ರಕ್ಷಿಸು



ಶುಂಭನಿಶುಂಭರ ವಧಿಸಿದ ಮಾತೆಯೆ
ಲೋಕಕೆ ನೀಡಿದೆ ನೆಮ್ಮದಿಯ
ದೀನರ ಬದುಕಿನ ಕಂಟಕ ಕಳೆಯಿತು
ಶಿಷ್ಟರ ಬಾಳಲಿ ನವ ಉದಯ

ವೃಷಭವಾಹನಿ ಶ್ವೇತ ವಸ್ತ್ರಧಾರಿಣಿ
ಚತುರ್ಭುಜೆ ಸುಂದರ ಈ ನಿಲುವು
ದನುಜರ ಅಳಿಸಲು ಹಿಡಿದಳು ಮಾತೆಯು
ಕರದಲಿ ತ್ರಿಶೂಲ ಪಾಶಗಳು

ನವರಾತ್ರಿಯಲಿ ಎಂಟನೆ ದಿನದಲಿ
ಪೂಜೆಯಗೊಳ್ಳುವ ಮಹಾಗೌರಿ
ಲೋಕವ ಕಾಡುವ ದುಷ್ಟರ ಅಳಿಸುತ
ಭಕ್ತರ ರಕ್ಷಿಸು ದಯೆದೋರಿ

ಕಂಪನು ಬೀರುವ ಸುಂದರ ಹೂಗಳ
ಇರಿಸಿದೆ ಮಾತೆಯೆ ಚರಣದಲಿ
ನಿನ್ನಯ ನಾಮಸ್ಮರಣೆಯ ಗೈಯುವೆ
ಪೊರೆವುದು ಶಂಕರಿ ಕರುಣದಲಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ದಸರಾ

ನವ ರ‍್ರಾತಿಗಳು
ಮೈಸೂರ ದಸರಾಗಳು
ನವರಾತ್ರಿ ಉತ್ಸವಗಳು
ಎಷೊಂದು ಸುಂದರವು
ಹಬ್ಬದ ಸಡಗರಗಳು
ನವ ಅವಾತರಗಳು
ನವ ಬಣ್ಣಗಳು
ಹಳದಿ ಬಣ್ಣಗಳು
ಶೈಲಪುತ್ರಿ ದುರ್ಗೆ
ಹಸಿರು ಬಣ್ಣಗಳು
ಬ್ರಹ್ಮಚಾರಿಣಿ ದುರ್ಗೆ
ಬೂದು ಬಣ್ಣಗಳು
ಚಂದ್ರಘಂಟಾ ದುರ್ಗೆ
ಕೇಸರಿ ಬಣ್ಣಗಳು
ಕೂಷ್ಮಾಂಡದೇವಿ ದುರ್ಗೆ
ಬಿಳಿ ಬಣ್ಣಗಳು
ಸ್ಕಂದಾ ಮಾತಾ ದುರ್ಗೆ
ಕೆಂಪು ಬಣ್ಣಗಳು
ಕಾತ್ಯಾಯಿನಿ ದುರ್ಗೆ
ನೀಲಿ ಬಣ್ಣಗಳು
ಕಾಳರಾತ್ರಿ ಮಹಾಮಾಯೇ
ಗುಲಾಬಿ ಬಣ್ಣಗಳು
ಮಹಾ ಗೌರಿ ತಾಯಿ
ನೇರಳೆ ಬಣ್ಣಗಳು
ಸಿದ್ಧಿಧಾತ್ರಿ ತಾಯಿ
ದೇವಿಯ ಅವತಾರಗಳು
ನವರಾತ್ರಿಯ ದಿನಗಳು
ಆಯುಧ ಪೂಜೆಗಳು
ವಿಜಯದಶಮಿ ಹಬ್ಬಗಳು
ದಸಾರ ಹಬ್ಬದ ಸಂಭ್ರಮಗಳು.

– ವಿ.ಎಂ.ಎಸ್.ಗೋಪಿ ಬೆಂಗಳೂರು

# ಆತ್ಮಾಭಿಮಾನದ ಸಂಕೇತ ರತನ್ ಜಿ ಟಾಟಾ...

ಒಂದು ಸೂಜಿಯನ್ನು ತಯಾರಿಸಲು ಕೂಡ ಸಾಧ್ಯವಾಗದ ಭಾರತ ದೇಶ ಇಂದು ವಿಜ್ಞಾನ, ತಂತ್ರಜ್ಞಾನ ಮತ್ತು ಆರ್ಥಿಕತೆಯಲ್ಲಿ ಜಾಗತಿಕ ಮನ್ನಣೆ ಗಳಿಸಲು ತನ್ನ ಅಹರ್ನಿಶಿ ಕಾಣಿಕೆ ನೀಡಿರುವ ಕೆಲವೇ ಕೆಲವು ಜನರಲ್ಲಿ ಟಾಟಾ ಗ್ರೂಪ್ಸ್ ನ ರತನ್ ಟಾಟಾ ಕೂಡ ಒಬ್ಬರು. ತಮ್ಮ 87ರ ಹರಯದಲ್ಲಿ ಟಾಟಾ ಸಂಸ್ಥೆಯ ಅಭ್ಯುದಯಕ್ಕೆ ಅಹರ್ನಿಶಿ ದುಡಿದ ವ್ಯಕ್ತಿ ರತನ ಜಿ ಟಾಟಾ ಕಳೆದ ರಾತ್ರಿ ನಿಧನರಾಗಿದ್ದಾರೆ.

ಮುಂಬೈಯ ಬ್ರಿಟಿಷರು ಮುಂಬೈಯನ್ನು ಆಳುತ್ತಿರುವ ಅವಧಿಯಲ್ಲಿ 28 ಡಿಸೆಂಬರ್ 1937 ರಂದು ರತನ ಜಿ ಅವರು ಸೂರತ್ ನಲ್ಲಿ ಜನಿಸಿದರು. ಟಾಟಾ ಕುಟುಂಬಕ್ಕೆ ದತ್ತು ಪಡೆದ ಟಾಟಾ ಮತ್ತು ಸೋದರ ಸೊಸೆ ಸೂನಿ ಟಾಟಾ ಅವರ ಮಗ. ಟಾಟಾ ಸಮೂಹದ ಸಂಸ್ಥಾಪಕ ಜಮ್ ಶೇಡ್ಜಿ ಟಾಟಾ ಅವರ ಮೊಮ್ಮಗ. 10ನೇ ವಯಸ್ಸಿನಲ್ಲಿ ಪೋಷಕರು ಬೇರೆಯಾದ ಕಾರಣ ಅಜ್ಜಿಯ ಆಶ್ರಯದಲ್ಲಿ ರತನ್ ಜಿ ಬೆಳೆದರು. ಮುಂಬೈನ ಕೆಂಪಿಯನ್ ಶಾಲೆಯಲ್ಲಿ ಎಂಟನೇ ತರಗತಿಯವರೆಗೆ ಓದಿದ ರತನ್ ಟಾಟಾ ಮುಂದೆ ಶಿಮ್ಲಾದ ಬಿಷಪ್ ಕಾಟನ್ ಶಾಲೆಯಲ್ಲಿ ಓದಿದರು. ನ್ಯೂಯಾರ್ಕ್ ನ ರಿವರ್ ಡೈಲ್ ಸ್ಕೂಲ್ ನಲ್ಲಿ 1955 ರಲ್ಲಿ ಪದವಿ ಪಡೆದರು. 1959ರಲ್ಲಿ ಕಾನೆ9ಲ್ ಕಾಲೇಜಿನಿಂದ ವಾಸ್ತು ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು. 1977 ರಲ್ಲಿ ಹಾರ್ವರ್ಡ್ ಮ್ಯಾನೇಜ್ಮೆಂಟ್ ಸ್ಕೂಲನಿಂದ ಏಳು ವಾರಗಳ ಅಡ್ವಾನ್ಸ್ಡ ಮ್ಯಾನೇಜ್ಮೆಂಟ್ ತರಬೇತಿಯನ್ನು ಪಡೆದರು.

1970ರಲ್ಲಿ ತಮ್ಮ ಟಾಟಾ ಮಾತೃ ಸಂಸ್ಥೆಯಲ್ಲಿ ವ್ಯವಸ್ಥಾಪಕ ಹುದ್ದೆಯನ್ನು ಪಡೆದು ನೆಲ್ಕೋ (ಟಿಜಟಛಿಿ) ದಲ್ಲಿ ಕಾರ್ಯಾರಂಭಿಸಿದರು. ಮುಂದೆ ಟಾಟಾ ಸಂಸ್ಥೆ ನಷ್ಟ ಅನುಭವಿಸುವುದನ್ನು ಕೂಡ ಕಂಡರು. 1991 ರಲ್ಲಿ ಜೆ ಆರ್ ಡಿ ಟಾಟಾ ಅವರು ಸಂಸ್ಥೆಯ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದು ತಮ್ಮ ಜಾಗದಲ್ಲಿ ರತನ್ ಟಾಟಾರವರನ್ನು ಕೂರಿಸಿದರು. ಆರಂಭದಲ್ಲಿಯೇ ರತನ್ ಜಿ ಅವರು ಸಾಕಷ್ಟು ಪ್ರತಿರೋಧವನ್ನು ತಮ್ಮದೇ ಸಂಸ್ಥೆಯ ಸಹೋದ್ಯೋಗಿಗಳಿಂದ ಅನುಭವಿಸಬೇಕಾಯಿತು. ರತನ್ ಟಾಟಾ ಈ ಕ್ಲಿಷ್ಟಕರ ಸನ್ನಿವೇಶದಲ್ಲಿ ಯುವ ಪಡೆಗಳಿಗೆ ಪ್ರೋತ್ಸಾಹ ತುಂಬುತ್ತಾ ಅವರಿಗೆ ಹೆಚ್ಚಿನ ಸಹಾಯ ಸಹಕಾರ ನೀಡುತ್ತಾ ಟಾಟಾ ಸಂಸ್ಥೆಯ ಶ್ರೇಯೋಭಿವೃದ್ಧಿಗೆ ಶ್ರಮಿಸಿದರು. ಗುಂಪು ಜಾಗತೀಕರಣವನ್ನು ತುಂಬಿಕೊಳ್ಳಲು ಅನವಶ್ಯಕ ಕಾರ್ಯಗಳಿಂದ ತಮ್ಮನ್ನು ತಾವೇ ತೊಡಗಿಸಿಕೊಳ್ಳುವುದನ್ನು ನಿಲ್ಲಿಸಿದರು. ಪ್ರಸ್ತುತ 31 ವರ್ಷಗಳಲ್ಲಿ ರತನ್ ಜಿ ಟಾಟಾ ಸರಿಸುಮಾರು 50 ಶೇಕಡ ಕಂಪನಿಯ ಆದಾಯವನ್ನು ಹೆಚ್ಚಿಸಿದರು.

ಟಾಟಾ ಸಂಸ್ಥೆಯನ್ನು ರತನ್ ಜಿ ಸೇರಿದಾಗ ಸರಕುಗಳ ಮಾರಾಟದಲ್ಲಿ ಹೆಚ್ಚು ಕಾರ್ಯನಿರ್ವಹಿಸುತ್ತಿದ್ದ ಸಂಸ್ಥೆಯು ರತನ ಜಿಯವರ ಅಧಿಕಾರದ ಕೊನೆಯ ಸಮಯದಲ್ಲಿ ಬ್ರಾಂಡ್ ಗಳ ಮೇಲೆ ಆಧರಿತವಾಯಿತು. ಟಾಟಾ ಟಿ ಟೆಟ್ಲಿ, ಟಾಟಾ ಜಾಗ್ವಾರ್, ಲ್ಯಾಂಡ್ ರೋವರ್ ಮತ್ತು ಟಾಟಾ ಸ್ಟೀಲ್ ಕೊರಸಗಳನ್ನು ತಮ್ಮ ಸ್ವಾಧೀನಪಡಿಸಿಕೊಂಡರು ರತನ್ ಟಾಟಾ. ಈ ಸ್ವಾಧೀನೀಕರಣದಿಂದ ಕೇವಲ ಭಾರತದಲ್ಲಿ ಮಾತ್ರವಲ್ಲದೆ ಜಾಗತಿಕ ಮಟ್ಟದಲ್ಲಿಯೂ ಟಾಟಾ ಸಂಸ್ಥೆಯು ತನ್ನ ವ್ಯವಹಾರವನ್ನು ವಿಸ್ತರಿಸಿಕೊಂಡಿತು.ಮುಂದೆ ಅತ್ಯಂತ ಕಡಿಮೆ ಬೆಲೆಯ, ಎಲ್ಲರ ಕೈಗೆಟಕುವ ದರದಲ್ಲಿ ನ್ಯಾನೋ ಕಾರುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಮೂಲಕ ರತನ್ ಟಾಟಾ ಅವರು ಕೆಳ ಮಧ್ಯಮ ವರ್ಗದವರು ಕೂಡ ವೈಯುಕ್ತಿಕ ವಾಹನವನ್ನು ಹೊಂದುವ ಅವಕಾಶವನ್ನು ಪಡೆಯುವಂತೆ ಮಾಡುವಲ್ಲಿ ಸಫಲರಾದರು.




ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಮುಂದೆ ಟಾಟಾ ಸಂಸ್ಥೆಯು ಎಲೆಕ್ಟ್ರಿಕ್ ವಾಹನಗಳನ್ನು ಗುಜರಾತ್ ನ ಸಾನಂದ್ ನಲ್ಲಿ ಉತ್ಪಾದಿಸಲು ಪ್ರಾರಂಭಿಸಿತು. ಇದನ್ನು ಭಾರತದ ಕನಸಿನ ವಾಹನ ಎಂದು ಟಾಟಾ ಸಂಸ್ಥೆ ಕರೆಯಿತು. ತಮ್ಮ 75 ನೇ ವಯಸ್ಸಿನಲ್ಲಿ ರತನ ಜಿ ಟಾಟಾ ಡಿಸೆಂಬರ್ 28 2012ರಂದು ಸ್ವಯಂ ನಿವೃತ್ತಿ ಹೊಂದಿದರು. ಆದರೆ ಸಂಸ್ಥೆಯ ಉತ್ತರಾಧಿಕಾರದಲ್ಲಿ ಗೊಂದಲ ಉಂಟಾದ ಕಾರಣ 2016ರಲ್ಲಿ ಮತ್ತೆ ರತನ್ ಜಿ ಟಾಟಾ ಅವರನ್ನೂ ಹಂಗಾಮಿ ಅಧ್ಯಕ್ಷರನ್ನಾಗಿ ಮಾಡಲಾಯಿತು.

ಟಾಟಾ ಅವರು ತಮ್ಮ ಸ್ವಂತ ಸಂಪತ್ತಿನಿಂದ ವಿವಿಧ ಕಂಪನಿಗಳಲ್ಲಿ ಹೂಡಿಕೆ ಮಾಡಿದ್ದಾರೆ. ಅವರು ಭಾರತದ ಪ್ರಮುಖ ಇ-ಕಾಮರ್ಸ್ ವೆಬ್‌ಸೈಟ್‌ಗಳಲ್ಲಿ ಒಂದಾದ ಸ್ನ್ಯಾಪ್‌ಡೀಲ್‌ನಲ್ಲಿ ಹೂಡಿಕೆಮಾಡಿ ದ್ದಾರೆ. ಜನವರಿ 2016 ರಲ್ಲಿ, ಅವರು ಆನ್‌ಲೈನ್ ಪ್ರೀಮಿಯಂ ಇಂಡಿಯನ್ ಟೀ ಮಾರಾಟಗಾರರಾದ ಟಿ ಬಾಕ್ಸ್ ನಲ್ಲಿ ಹೂಡಿಕೆ ಮಾಡಿದರು, ಮತ್ತು ಕ್ಯಾಶ್ ಕರೋ ಡಾಟ್ ಕಾಮ್, ರಿಯಾಯಿತಿ ಕೂಪನ್‌ಗಳು ಮತ್ತು ಕ್ಯಾಶ್-ಬ್ಯಾಕ್ ವೆಬ್‌ಸೈಟ್. ಭಾರತದಲ್ಲಿ ಆರಂಭಿಕ ಮತ್ತು ಕೊನೆಯ ಹಂತದ ಕಂಪನಿಗಳಲ್ಲಿ ಸಣ್ಣ ಹೂಡಿಕೆಗಳನ್ನು ಮಾಡಿದ್ದಾರೆ, ಓಲಾ ಕ್ಯಾಬ್ಸ್‌ನಲ್ಲಿ ಏಪ್ರಿಲ್ 2015 ರಲ್ಲಿ, ಟಾಟಾ ಚೀನೀ ಸ್ಮಾರ್ಟ್‌ಫೋನ್ ಸ್ಟಾರ್ಟ್‌ಅಪ್ ಕ್ಸಿಯಾಮಿ ಯಲ್ಲಿ ಪಾಲನ್ನು ಪಡೆದುಕೊಂಡಿದೆ ಎಂದು ವರದಿಯಾಗಿದೆ. 2016 ರಲ್ಲಿ, ಅವರು ಆನ್‌ಲೈನ್ ರಿಯಲ್-ಎಸ್ಟೇಟ್ ಪೋರ್ಟಲ್‌ನಲ್ಲಿ ನೆಸ್ಟಾವೇನಲ್ಲಿ ಹೂಡಿಕೆ ಮಾಡಿದರು, ಅದು ನಂತರ ಆನ್‌ಲೈನ್ ರಿಯಲ್-ಎಸ್ಟೇಟ್ ಮತ್ತು ಪೆಟ್-ಕೇರ್ ಪೋರ್ಟಲ್ ಡಾಗ್‌ಸ್ಪಾಟ್ ಅನ್ನು ಪ್ರಾರಂಭಿಸಲು ಜೆನಿಫೈ ಯನ್ನೂ ಸ್ವಾಧೀನಪಡಿಸಿಕೊಂಡರು. ಟಾಟಾ ಹಿರಿಯ ನಾಗರಿಕರಿಗಾಗಿ ಭಾರತದ ಒಡನಾಡಿ ಸ್ಟಾರ್ಟ್‌ಅಪ್ ಅನ್ನು ಪ್ರಾರಂಭಿಸಿತು, ಗುಡ್‌ಫೆಲೋಸ್, ಅಂತರ್‌ಜನಾಂಗೀಯ ಸ್ನೇಹವನ್ನು ಉತ್ತೇಜಿಸುವ ಸಲುವಾಗಿಯೂ ಕೂಡ ಅವರು ಕಾರ್ಯನಿರ್ವಹಿಸಿದರು.



ಭಾರತ ದೇಶದಲ್ಲಿ ಟಾಟಾ ಸಂಸ್ಥೆಯು ತನ್ನ ಉತ್ಪನ್ನದ ಅತಿ ಹೆಚ್ಚಿನ ಪಾಲನ್ನು ಶಿಕ್ಷಣ, ಆರೋಗ್ಯ,ವೈದ್ಯಕೀಯ ಮತ್ತಿತರ ಕಾರ್ಯ ಚಟುವಟಿಕೆಗಳಿಗೆ ವಿನಿಯೋಗಿಸಿದೆ. ಜೈವಿಕ ಮತ್ತು ಭೌತಿಕ ವಿಜ್ಞಾನಗಳಿಗೆ ಸೌಲಭ್ಯಗಳನ್ನು ಹೊಂದಿದೆ ಮತ್ತು ಟಾಟಾ ಇನ್‌ಸ್ಟಿಟ್ಯೂಟ್ ಫಾರ್ ಜೆನೆಟಿಕ್ಸ್ ಅಂಡ್ ಸೊಸೈಟಿಯ ನೆಲೆಯಾಗಿದೆ. ಟಾಟಾ ಇನ್‌ಸ್ಟಿಟ್ಯೂಟ್ ಫಾರ್ ಜೆನೆಟಿಕ್ಸ್ ಅಂಡ್ ಸೊಸೈಟಿಯು ಯುಸಿ ಸ್ಯಾನ್ ಡಿಯಾಗೋ ಮತ್ತು ಭಾರತದಲ್ಲಿನ ಸಂಶೋಧನಾ ಕಾರ್ಯಾಚರಣೆಗಳ ನಡುವಿನ ಸಂಶೋಧನೆಯನ್ನು ಸಂಘಟಿಸುವ ದ್ವಿ-ರಾಷ್ಟ್ರೀಯ ಸಂಸ್ಥೆಯಾಗಿದ್ದು, ವೆಕ್ಟರ್-ಹರಡುವ ರೋಗಗಳನ್ನು ಎದುರಿಸುವ ಕ್ಷೇತ್ರದಲ್ಲಿ ಸಾಮಾಜಿಕ ಮತ್ತು ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಸಹಾಯ ಮಾಡುತ್ತದೆ. ಟಾಟಾ ಟ್ರಸ್ಟ್‌ನಿಂದ ಉದಾರವಾದ 70 ಮಿಲಿಯನ್ ಡಾಲರ್ ಉಡುಗೊರೆಯನ್ನು ಗುರುತಿಸಿ ಟಾಟಾ ಹಾಲ್ ಅನ್ನು ಹೆಸರಿಸಲಾಗಿದೆ.

ಟಾಟಾ ಗ್ರೂಪ್‌ನ ಲೋಕೋಪಕಾರಿ ಅಂಗಸಂಸ್ಥೆಯಾದ ಟಾಟಾ ಎಜುಕೇಶನ್ ಅಂಡ್ ಡೆವಲಪ್‌ಮೆಂಟ್ ಟ್ರಸ್ಟ್ 28 ಮಿಲಿಯನ್ ಡಾಲರ್ ನ ಸ್ಕಾಲರ್‌ಶಿಪ್ ನಿಧಿಯನ್ನು ನೀಡಿತು, ಇದು ಕಾರ್ನೆಲ್ ವಿಶ್ವವಿದ್ಯಾಲಯವು ಭಾರತದ ಪದವಿಪೂರ್ವ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ನೀಡಲು ಅನುವು ಮಾಡಿಕೊಡುತ್ತದೆ. ವಿದ್ಯಾರ್ಥಿವೇತನ ನಿಧಿಯು ಯಾವುದೇ ಸಮಯದಲ್ಲಿ ಸರಿಸುಮಾರು 20 ವಿದ್ವಾಂಸರನ್ನು ಬೆಂಬಲಿಸುತ್ತದಲ್ಲದೆ ಅವರ ಹಣಕಾಸಿನ ಪರಿಸ್ಥಿತಿಗಳನ್ನು ಲೆಕ್ಕಿಸದೆಯೇ ಅತ್ಯುತ್ತಮ ಭಾರತೀಯ ವಿದ್ಯಾರ್ಥಿಗಳು ಕಾರ್ನೆಲ್‌ಗೆ ಪ್ರವೇಶವನ್ನು ಹೊಂದಿದ್ದಾರೆ ಎಂದು ಖಚಿತಪಡಿಸುವ ಈ ವಿದ್ಯಾರ್ಥಿವೇತನವನ್ನು ವಾರ್ಷಿಕವಾಗಿ ನೀಡಲಾಗುತ್ತದೆ.

2010 ರಲ್ಲಿ, ಟಾಟಾ ಸಮೂಹ ಸಂಸ್ಥೆಗಳು ಮತ್ತು ಟಾಟಾ ಚಾರಿಟಿ ಸಂಸ್ಥೆಗಳು ಹಾರ್ವರ್ಡ್ ಬಿಜಿನೆಸ್ ಸ್ಕೂಲ್ ನಲ್ಲಿ (ಊಃಖ) ನಲ್ಲಿ ಕಾರ್ಯನಿರ್ವಾಹಕ ಕೇಂದ್ರದ ನಿರ್ಮಾಣಕ್ಕಾಗಿ 50 ಮಿಲಿಯನ್ ಡಾಲರ್ ದೇಣಿಗೆ ನೀಡಿದರು.ಟಾಟಾ ಸಂಸ್ಥೆಯಗೌರವಾನ್ವಿತ ಅಧ್ಯಕ್ಷ ರತನ್ ಟಾಟಾ ನಂತರ ಕಾರ್ಯನಿರ್ವಾಹಕ ಕೇಂದ್ರವನ್ನು ಟಾಟಾ ಹಾಲ್ ಎಂದು ಹೆಸರಿಸಲಾಗಿದೆ . ಒಟ್ಟು ನಿರ್ಮಾಣ ವೆಚ್ಚವನ್ನು 100 ಮಿಲಿಯನ್ ಡಾಲರ್ ಎಂದು ಅಂದಾಜಿಸಲಾಗಿದೆ. ಟಾಟಾ ಹಾಲ್ ಕ್ಯಾಂಪಸ್‌ನ ಮೂಲೆಯಲ್ಲಿದ್ದು ಹಾರ್ವರ್ಡ್ ಬ್ಯುಸಿನೆಸ್ ಸ್ಕೂಲ್‌ನ ಮಿಡ್-ಕಾರ್ಯನಿರ್ವಾಹಕ ಶಿಕ್ಷಣ ಕಾರ್ಯಕ್ರಮಕ್ಕೆ ಮೀಸಲಾಗಿದೆ. ಇದು ಏಳು ಅಂತಸ್ತಿನ ಎತ್ತರ ಮತ್ತು ಸುಮಾರು 155,000 ಒಟ್ಟು ಚದರ ಅಡಿ ಇದ್ದು ಶೈಕ್ಷಣಿಕ ಮತ್ತು ಬಹುಪಯೋಗಿ ಸ್ಥಳಗಳ ಜೊತೆಗೆ ಸರಿಸುಮಾರು 180 ಮಲಗುವ ಕೋಣೆಗಳನ್ನು ಹೊಂದಿದೆ.

ಟಿಸಿಎಸ ಸಂಸ್ಥೆಯ ಮೂಲಕ ಕಾರ್ನೆಗಿ ಮೆಲನ್ ವಿಶ್ವವಿದ್ಯಾನಿಲಯಕ್ಕೆ ಅರಿವಿನ ವ್ಯವಸ್ಥೆಗಳು ಮತ್ತು ಸ್ವಾಯತ್ತ ವಾಹನಗಳನ್ನು ಸಂಶೋಧಿಸುವ ಸೌಲಭ್ಯಕ್ಕಾಗಿ ಕಂಪನಿಯಿಂದ ಇದುವರೆಗೆ ಅತಿದೊಡ್ಡ ದೇಣಿಗೆ ನೀಡಿದೆ . ಟಿಸಿಎಸ್ ಹಾಲ್ ಎಂದು ಕರೆಯಲ್ಪಡುವ ಈ ಭವ್ಯವಾದ 48,000 ಚದರ ಅಡಿ ಕಟ್ಟಡಕ್ಕೆ ಟಿಸಿಎಸ್ ಸಂಸ್ಥೆಗೆ 35 ಮಿಲಿಯನ್ ದೇಣಿಗೆ ನೀಡಿದೆ.

2014 ರಲ್ಲಿ ಮುಂಬೈಯ ಟಾಟಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಗೆ ಸೀಮಿತ ಸಂಪನ್ಮೂಲಗಳೊಂದಿಗೆ ಜನರು ಮತ್ತು ಸಮುದಾಯಗಳ ಅಗತ್ಯಗಳಿಗೆ ಸೂಕ್ತವಾದ ವಿನ್ಯಾಸ ಮತ್ತು ಎಂಜಿನಿಯರಿಂಗ್ ತತ್ವಗಳನ್ನು ಅಭಿವೃದ್ಧಿಪಡಿಸಲು ಟಾಟಾ ಸೆಂಟರ್ ಫಾರ್ ಟೆಕ್ನಾಲಜಿ ಅಂಡ್ ಡಿಸೈನ್ (ಖಿಅಖಿಆ) ಅನ್ನು ರಚಿಸಿತು. ಅವರು ಸಂಸ್ಥೆಗೆ ? 950 ಮಿಲಿಯನ್ ನೀಡಿದರು, ಇದು ಆ ಸಂಸ್ಥೆಯ ಇತಿಹಾಸದಲ್ಲಿ ಪಡೆದ ಅತಿದೊಡ್ಡ ದೇಣಿಗೆಯಾಗಿದೆ.

ರತನ್ ಟಾಟಾ ಅವರ ಅಧ್ಯಕ್ಷತೆಯಲ್ಲಿ ಟಾಟಾ ಟ್ರಸ್ಟ್‌ಗಳು ಆಲ್‌ಝೈಮರ್‌ನ ಕಾಯಿಲೆಗೆ ಕಾರಣವಾದ ಕಾರ್ಯವಿಧಾನಗಳನ್ನು ಅಧ್ಯಯನ ಮಾಡಲು ಮತ್ತು ಅದರ ಆರಂಭಿಕ ರೋಗನಿರ್ಣಯ ಮತ್ತು ಚಿಕಿತ್ಸೆಗಾಗಿ ವಿಧಾನಗಳನ್ನು ಅಭಿವೃದ್ಧಿಪಡಿಸಲು ಸೆಂಟರ್ ಫಾರ್ ನ್ಯೂರೋಸೈನ್ಸ್, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ 750 ಮಿಲಿಯನ್ ಡಾಲರ್ ನಷ್ಟು ಅನುದಾನವನ್ನು ನೀಡಿತು. ಈ ಅನುದಾನವು 2014 ರಲ್ಲಿ ಪ್ರಾರಂಭವಾಗಿ 5 ವರ್ಷಗಳವರೆಗೆ ಹರಡಬೇಕಿತ್ತು.

ಟಾಟಾ ಸಂಸ್ಥೆಯು ರತನ್ ಟಾಟಾ ಅವರ ನಾಯಕತ್ವದಲ್ಲಿ ಟಾಟಾ ಸೆಂಟರ್ ಆಫ್ ಟೆಕ್ನಾಲಜಿ ಅಂಡ್ ಡಿಸೈನ್ ಅನ್ನು ಮೆಸಾಚೂಸೆಟ್ಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಯಲ್ಲಿ ಭಾರತದ ಮೇಲೆ ಆರಂಭಿಕ ಗಮನ ಕೇಂದ್ರೀಕರಿಸುವ ಮೂಲಕ ಸಂಪನ್ಮೂಲ-ನಿರ್ಬಂಧಿತ ಸಮುದಾಯಗಳ ಸವಾಲುಗಳನ್ನು ಎದುರಿಸುವ ಉದ್ದೇಶದೊಂದಿಗೆ ರಚಿಸಿತು.

ರತನ್ ಟಾಟಾ ಅವರು 2000 ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು 2008ರಲ್ಲಿ ಪದ್ಮವಿಭೂಷಣ ಪ್ರಶಸ್ತಿಯನ್ನು ಪಡೆದರು, ಇದು ಭಾರತ ಸರ್ಕಾರದಿಂದ ನೀಡಲ್ಪಟ್ಟ ಮೂರನೇ ಮತ್ತು ಎರಡನೇ ಅತ್ಯುನ್ನತ ನಾಗರಿಕ ಗೌರವವಾಗಿದೆ. 2021 ರಲ್ಲಿ ಅಸ್ಸಾಂನ ಅತ್ಯುನ್ನತ ನಾಗರಿಕ ಪ್ರಶಸ್ತಿ ಅಸ್ಸಾಂ ವೈಭವ' ಅನ್ನು ಅಸ್ಸಾಂನಲ್ಲಿ ಕ್ಯಾನ್ಸರ್ ಆರೈಕೆಯನ್ನು ಹೆಚ್ಚಿಸುವಲ್ಲಿ ಅವರ ಅಸಾಧಾರಣ ಕೊಡುಗೆಗಾಗಿ ಪಡೆದರು. ಟಾಟಾ ಅವರ ಅದ್ವಿತೀಯ ಕಾರ್ಯನಿರ್ವಹಣೆಗೆ ಅನೇಕ ಗೌರವ ಡಾಕ್ಟರೇಟ್ ಗಳು ಗೌರವ ಫೆಲೋಶಿಪ್ ಗಳು ವಿಶ್ವದ ವಿವಿಧ ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳಿಂದ ದೊರಕಿವೆ. ಫ್ರಾನ್ಸ್ ಸರ್ಕಾರವು ಅವರಿಗೆ ಉನ್ನತ ನಾಗರಿಕ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಬ್ರಿಟಿಷ್ ಸರ್ಕಾರದ ರಾಣಿ ವಿಕ್ಟೋರಿಯಾ ಕೂಡ ಅವರಿಗೆ 2014ರಲ್ಲಿ ಉನ್ನತ ಗೌರವ ನೀಡಿ ಸತ್ಕರಿಸಿದ್ದಾರೆ.

ಇಷ್ಟೆಲ್ಲಾ ಸಾಧನೆ ಮಾಡಿರುವ ರತನ್ ಜಿ ಟಾಟಾ ಅವರು ಅತ್ಯಂತ ಸರಳ ಜೀವಿ ಅವರು ಮದುವೆಯಾಗದೆ ಇದ್ದರೂ ಲಕ್ಷಾಂತರ ಮಕ್ಕಳನ್ನು ಬೆಳೆಸಿದ್ದಾರೆ ಅವರ ಅಭ್ಯುದಯಕ್ಕಾಗಿ ದುಡಿದಿದ್ದಾರೆ. ದಾರಿ ದೀಪವಾಗಿದ್ದಾರೆ ಸ್ಪೂರ್ತಿಯಾಗಿದ್ದಾರೆ, ಪ್ರೇರಣೆಯಾಗಿದ್ದಾರೆ. ಒಂದು ಬಾರಿ ಪತ್ರಕರ್ತರು ರತನ್ ಜಿ ಟಾಟಾ ರವರಿಗೆ ಅಂಬಾನಿಯವರ ವ್ಯವಹಾರ ಮತ್ತು ಟಾಟಾ ಸಂಸ್ಥೆಯ ವ್ಯವಹಾರದ ಕುರಿತು ಪ್ರಶ್ನಿಸಿದಾಗ ರತನ್ ಜಿ ಟಾಟಾ ಉತ್ತರಿಸಿದ್ದು ಹೀಗೆ... ಅಂಬಾನಿಯವರು ವ್ಯವಹಾರವನ್ನು ಮಾಡುತ್ತಾರೆ ಮತ್ತು ನಾವು ಉದ್ಯಮವನ್ನು ನಡೆಸುತ್ತೇವೆ. ಉದ್ಯಮಗಳನ್ನು ನಡೆಸುವವರು ಎಂದಿಗೂ ಲಾಭ ನಷ್ಟಗಳ ಕುರಿತು ಯೋಚನೆ ಮಾಡುವುದಕ್ಕಿಂತ ಆ ಉದ್ಯಮಗಳಿಂದ ನಮ್ಮ ದೇಶಕ್ಕೆ,ಜನರಿಗೆ ದೊರೆಯಬಹುದಾದ ಆರ್ಥಿಕ ಸೌಲಭ್ಯಗಳು ಕುರಿತು ನಾವು ಯೋಚಿಸುತ್ತೇವೆ ಎಂದು.

ಭಾರತದ ಉತ್ತುಂಗತೆಯನ್ನು ಎತ್ತಿ ಹಿಡಿಯುವಲ್ಲಿ ರತನ ಜಿ ಟಾಟಾ ಯಾವತ್ತು ತಮ್ಮ ಪೂರ್ವಿಕರ ಶ್ರದ್ಧೆಯನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.ಮೊಟ್ಟ ಮೊದಲು ಭಾರತದಲ್ಲಿ ವಿಮಾನಯಾನ ಸಂಸ್ಥೆಯನ್ನು ಆರಂಭಿಸಿದ ಜಂಶೆಡ್ ಜಿ ಟಾಟಾ....ಇಂದು ಭಾರತದ ಇಂಡಿಯನ್ ಏರ್ಲೈನ್ಸ್ ಸಂಕಷ್ಟದಲ್ಲಿರುವಾಗ ಮತ್ತೆ ಅದರ ಚುಕ್ಕಾಣಿಯನ್ನು ಹಿಡಿದಿರುವ ರತನ್ ಜಿ ಟಾಟಾ ಇಂದಿಗೂ ಭಾರತದಲ್ಲಿ ಟಾಟಾ ಸಂಸ್ಥೆಯು ನಮ್ಮ ಭಾರತೀಯತೆಯ ಪ್ರತೀಕವಾಗಿ ನೆಲೆ ನಿಲ್ಲುವಲ್ಲಿ ಆದರ್ಶದ ಪಥದಲ್ಲಿ ನಡೆಯಲು ಭವ್ಯ ರಹದಾರಿಯನ್ನು ತೋರಿಸಿದ್ದಾರೆ. ರತನ್ ಜಿ ಟಾಟಾ ಅವರು ಈ ದೇಶ ಕಂಡ ಅಪ್ರತಿಮ ನಾಯಕರಲ್ಲಿ ಒಬ್ಬರು. ಯಾವುದೇ ಕಪ್ಪು ಚುಕ್ಕೆ ಇಲ್ಲದ ವ್ಯಕ್ತಿತ್ವ, ನಿರಾಡಂಬರತೆ, ಸರಳ ಜೀವನ ಶೈಲಿ ಮತ್ತು ಭಾರತದೆಡೆಗಿನ ಅವರ ಅನನ್ಯ ಶ್ರದ್ಧೆ ದಂತ ಕಥೆಯಾಗಿದ್ದು ಇದೀಗ ಅವರ ಮರಣದ ಸುದ್ದಿ ಜಗತ್ತಿನ ಉದ್ಯಮ ವಲಯಕ್ಕೆ ನೋವಿನ ಸಂಗತಿಯಾಗಿದ್ದು ಭಾರತೀಯರ ಪಾಲಿಗೆ ಕಾಲ ಕೆಳಗಿನ ನೆಲ ಕುಸಿದಂತಹ ಅನುಭವ.

ರತನ್ ಟಾಟರಂತವರು ವಿರಳ. ಮಾನವೀಯತೆ ಇರುವವರೆಗೂ ರತನ್ ಟಾಟಾ ಹೆಸರು ಅಜರಾಮರ.ಇದೋ ಉದ್ಯಮ ರಂಗದ ದೈತ್ಯ ಶಕ್ತಿ, ಮಾನವೀಯ ಮಿಡಿತಗಳ ಸ್ಪೂರ್ತಿ ರತನ್ ಟಾಟಾ ಅವರಿಗೆ ಇದೋ ನಮ್ಮ ನುಡಿ ನಮನ.

# ಶ್ರೀ ಕೊಟ್ಟೂರೇಶ್ವರ ಸನ್ನಿಧಿಯಲ್ಲಿ ದಸರಾ ಸಂಭ್ರಮ




■ **ಹಂಪಿ ಟೈಮ್ಸ್ ಕೊಟ್ಟೂರು**
ಪಟ್ಟಣದ ಅಸಂಖ್ಯಾತ ಭಕ್ತರ ಆರಾಧ್ಯದೈವ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯು ಶನಿವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಬನ್ನಿ ಮುಡಿಯಿತು.

ಆಯುದ ಪೂಜೆ ಹಾಗೂ ವಿಜಯ ದಶಮಿ ಪ್ರಯುಕ್ತ ಶ್ರೀ ಸ್ವಾಮಿಯ ಮಠದಲ್ಲಿ ಶುಕ್ರವಾರ ಮತ್ತು ಶನಿವಾರ ವಿವಿಧ ಧಾರ್ಮಿಕ ಪೂಜಾ ಕೈಂಕಾರ್ಯಗಳನ್ನು ವಿಜೃಂಭಣೆಯಿಂದ ಕೈಗೊಳ್ಳಲಾಯಿತು. ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಗೆ ಶನಿವಾರ ಮಠದಲ್ಲಿ ಧಾರ್ಮಿಕ ಪೂಜಾ ಕೈಂಕಾರ್ಯಗಳನ್ನು ನೆರವೇರಿಸಿಕೊಂಡು ಸಂಜೆ 3.50 ರ ವೇಳೆಗೆ ಅಕ್ಬರ್ ಬಾದಷಾನು ಕೊಟ್ಟಂತ ಖಡ್ಗವನ್ನು (ಫಿರಂಗಿ) ಬನ್ನಿ ಪತ್ರಿಯೊಳಗೆ ಪಲ್ಲಕಿಯಲ್ಲಿರಿಸಿ ಅರ್ಚಕರು ಆಯಗಾರ ಬಳಗದವರು ಹಾಗೂ ಧರ್ಮಕರ್ತರು ಉತ್ಸವದ ಮೂಲಕ ಸಾವಿರಾರು ಭಕ್ತರೊಂದಿಗೆ ಶ್ರೀ ಸ್ವಾಮಿಯಬಿರುದಾವಳಿಗಳಘೋಷಣೆಯೊಂದಿಗೆ ಬನ್ನಿ ಮಂಠಪಕ್ಕೆ ಸಾಗಿದರು.

ಶ್ರೀ ಸ್ವಾಮಿಯ ಪಲ್ಲಕ್ಕಿ ಉತ್ಸವದ ಮುಂದೆ ಶ್ರೀ ಕೊಟ್ಟೂರೇಶ್ವರ ಸ್ವಾಮಿಯ ಕ್ರಿಯಾ ಮೂರ್ತಿಗಳು ಶಿವಪ್ರಕಾಶ್ ದೇವರು ಮಹಲ್ ಮಠ ಇವರು ಮತ್ತು ಸಕಲ ಭಕ್ತಾದಿಗಳು ಸಮಳ,ಮೇಳ ಹಾಗೂ ನಂದಿ ದ್ವಜ ಕುಣತದೊಂದಿಗೆ ಶ್ರೀ ಸ್ವಾಮಿಯ ಉತ್ಸವವನ್ನು ರಾಜ ಬೀದಿಯಲ್ಲಿ ಸಾಗಿಸಿ ಬನ್ನಿ ಮಂಟಪಕ್ಕೆ ತೆರಳಿ ಖಡ್ಗವನ್ನು ಬನ್ನಿ ಮರಕ್ಕೆ ಸ್ಪರ್ಶಿಸಿ ಪೂಜೆ ಸಲ್ಲಿಸಿ ಬನ್ನಿ ಮುಡಿದರು.

ಶ್ರೀ ಸ್ವಾಮಿಯು ಬನ್ನಿ ಮುಡಿಯುತ್ತಿದ್ದಂತೆ ಆಗಮಿಸಿದ್ದ ಭಕ್ತರು ನಿಂತ ಜಾಗದಲ್ಲಿಯೇ ತೆಂಗಿನ ಕಾಯಿ ಹೊಡೆದು ನೈವೇದ್ಯ ಅರ್ಪಿಸಿದರು ನಂತರ ಪರಸ್ಪರರು ಬನ್ನಿ ವಿನಿಮಯ ಮಾಡಿಕೊಂಡು ಶುಭ ಕೋರಿದರು, ಹಿರಿಯರಿಗೆ, ಕಿರಿಯರು ಕಾಲಿಗೆ ಬಿದ್ದು ನಮಸ್ಕರಿಸಿ ಅಶೀರ್ವಾದ ಪಡೆದರು. ಧರ್ಮಕರ್ತರು ಎ.ಎಂ.ಶೇಖರಯ್ಯ, ಧಾರ್ಮಿಕ ದತ್ತಿ ಇಲಾಖೆ ಇಓ ಮಲ್ಲಪ್ಪ ಅರ್ಚಕ ನಾಗರಾಜ್, ಸಂತೋಷ, ಮಲ್ಲಿಕಾರ್ಜುನ ಸೇರಿದಂತೆ ಊರಿನ ಮುಖಂಡರು ಹಾಗೂ ಆಯಗಾರರು, ಭಕ್ತರು ಇದ್ದರು.



ವಿಜಯದಶಮಿ ನಿಮಿತ್ತ ಹಂಪಿಯ ರಥ ಬೀದಿಯಲ್ಲಿ ಭಕ್ತರು ದೀಪಗಳನ್ನು ಹಚ್ಚಿ ಭಕ್ತಿ ಸರ್ಪಪಿಸಿ ಶನಿವಾರ ಬನ್ನಿ ಮಹೋತ್ಸವದಲ್ಲಿ ಪಾಲ್ಗೊಂಡರು

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA





## ನಿತ್ಯ ಪಂಚಾಂಗ

ಮಾಸ: ಆಶ್ವೀಜ । ಸಂವತ್ಸರ: ಕ್ರೋಧಿ

**13–10–2024 – ಭಾನುವಾರ**

| | |
|---|---|
| ತಿಥಿ | : ದಶಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಧನಿಷ್ಠ |
| ಯೋಗ | : ಶೂಲ |
| ಕರಣ | : ಗರಜ |
| ಸೂರ್ಯೋದಯ | : 06:24:11 |
| ಸೂರ್ಯಾಸ್ತ | : 18:01:34 |
| ರಾಹು ಕಾಲ | : 16:34–18:02 |
| ಯಮಘಂಡ ಕಾಲ | : 12:13–13:40 |
| ಗುಳಿಕ ಕಾಲ | : 15:07–16:34 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 12–10–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.94 ಅಡಿ |
| ಒಳ ಹರಿವು | 50146 ಕ್ಯುಸೆಕ್ |
| ಹೊರ ಹರಿವು | 49966 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.539 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1615.09 ಅಡಿ |
| ಒಳ ಹರಿವು | 482 ಕ್ಯುಸೆಕ್ |
| ಹೊರ ಹರಿವು | 9049 ಕ್ಯುಸೆಕ್ |
| ಸಾಮರ್ಥ್ಯ | 48.627 ಟಿಎಂಸಿ |



# ದುಷ್ಟರ ಸಂಹಾರ, ಶಿಷ್ಟರ ರಕ್ಷಣೆಯೇ ದಸರಾ ಸಂಕೇತ - ಮುಖ್ಯಮಂತ್ರಿ ಸಿದ್ದರಾಮಯ್ಯ

■ ಹಂಪಿ ಟೈಮ್ಸ್ ಮೈಸೂರು

ದುಷ್ಟರ ಸಂಹಾರ, ಶಿಷ್ಟರ ರಕ್ಷಣೆಯೇ ದಸರಾದ ಸಂಕೇತ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.


ಮೈಸೂರಿನ ಸುತ್ತೂರು ಮಠದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು. ವಿಜಯ ದಶಮಿ, ದಸರಾ ಉತ್ಸವದ ಕೊನೆಯ ದಿನವಾಗಿದ್ದು, ಜಂಬೂಸವಾರಿ ನಡೆಯಲಿದ್ದು, ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ನಡೆಯಲಿದೆ. ಈ ಶುಭ ಸಂದರ್ಭದಲ್ಲಿ ನಾಡಿನ ಹಾಗೂ ದೇಶದ ಜನರಿಗೆ ದಸರಾ ಉತ್ಸವದ ಶುಭಾಶಯಗಳನ್ನು ಕೋರುತ್ತೇನೆ. ಈ ಬಾರಿನಲ್ಲಿ ಉತ್ತಮ ಮಳೆ ಹಾಗೂ ಬೆಳೆಯಾಗಿದ್ದು, ನಾಡಿನ ರೈತರಲ್ಲಿ ಸಂತಸ ಮನೆಮಾಡಿದೆ. ರಾಜ್ಯದ ಎಲ್ಲಾ ಜಲಾಶಯಗಳು ತುಂಬಿರುವುದು ಸಂತಸದ ವಿಚಾರ. ದುಷ್ಟರ ಸಂಹಾರ, ಶಿಷ್ಟರ ರಕ್ಷಣೆಯೇ ದಸರಾದ ಸಂಕೇತ. ರಾಜ್ಯದಲ್ಲಿ ಅಶಾಂತಿ ಮೂಡಿಸಿ, ಬದುಕುಗಳನ್ನು ಹಾಳುಮಾಡಲು ಸಂಚು ರೂಪಿಸುವವರಿಗೆ ದೇವರು ಸದ್ಬುದ್ಧಿ ನೀಡಲಿ ಎಂದು ತಿಳಿಸಿದರು.

# ಮೈಸೂರು ದಸರಾ ಚಿತ್ರಾವಳಿ






















---

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ವಿಜ್ಞಾನ

### ದಸರಾ ರಜಾ ಅವಧಿಯ ಅಭ್ಯಾಸ ಮಾಲಿಕೆ –2

ಈ ಕೆಳಗಿನ ಘಟಕವಾರು ಪ್ರಶ್ನೆಗಳಿಗೆ ಉತ್ತರಿಸಿ ಮತ್ತು ಅಭ್ಯಾಸ ಮಾಡಿ.

#### ಅಧ್ಯಾಯ 1 : ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣಗಳು

1. ಈ ಕೆಳಗಿನವುಗಳನ್ನು ನಿರೂಪಿಸಿ. ಪ್ರತಿಯೊಂದಕ್ಕೂ ಒಂದು ಉದಾಹರಣೆ ತಿಳಿಸಿ.
a] ಸಂಯೋಗ ಕ್ರಿಯೆ b] ವಿಭಜನ ಕ್ರಿಯೆ c] ಸ್ಥಾನಪಲ್ಲಟ ಕ್ರಿಯೆ
d] ದ್ವಿಸ್ಥಾನಪಲ್ಲಟ ಕ್ರಿಯೆ e] ರೆಡಾಕ್ಸ್ ಕ್ರಿಯೆ f] ನಶಿಸುವಿಕೆ
g] ಕಮಟುವಿಕೆ h] ಉತ್ಕರ್ಷಣೆ i] ಅಪಕರ್ಷಣೆ
2. ಅಂತರುಷ್ಣಕ ರಾಸಾಯನಿಕ ಕ್ರಿಯೆಗಳು ಮತ್ತು ಬಹಿರುಷ್ಣಕ ರಾಸಾಯನಿಕ ಕ್ರಿಯೆಗಳಿಗಿಂತ ಹೇಗೆ ಭಿನ್ನವಾಗಿವೆ ?
3. ನಶಿಸುವಿಕೆ ಎಂದರೇನು ? ನಶಿಸುವಿಕೆಯನ್ನು ತಡೆಗಟ್ಟುವ ವಿಧಾನಗಳನ್ನು ತಿಳಿಸಿ.
4. ಉದಾಹರಣೆಯೊಂದಿಗೆ ವಿಭಜನ ಕ್ರಿಯೆಗಳ ವಿಧಗಳನ್ನು ನಿರೂಪಿಸಿ.

#### ಅಧ್ಯಾಯ 5 : ಜೀವ ಕ್ರಿಯೆಗಳು

1. ದ್ಯುತಿಸಂಶ್ಲೇಷಣೆಯಲ್ಲಿ ಜರುಗುವ ಘಟನೆಗಳನ್ನು ತಿಳಿಸಿ. ದ್ಯುತಿಸಂಶ್ಲೇಷಣೆ ಕ್ರಿಯೆಯ ಸಮೀಕರಣ ಬರೆಯಿರಿ.
2. ವಿವಿಧ ಪ್ರಕ್ರಿಯೆಗಳ ಮೂಲಕ ಗ್ಲುಕೋಸ್ ವಿಭಜನೆಯನ್ನು ತೋರಿಸುವ ರೇಖಾ ನಕ್ಷೆಯನ್ನು ಬರೆಯಿರಿ.
3. ವಸ್ತುಗಳ ಸಾಗಾಣಿಕೆಯಲ್ಲಿ ಕ್ಸೈಲಂ ಮತ್ತು ಫ್ಲೋಯಂ ಅಂಗಾಂಶಗಳ ಪಾತ್ರವೇನು ?
4. ವಾಯುವಿಕ ಉಸಿರಾಟ ಮತ್ತು ಅವಾಯುವಿಕ ಉಸಿರಾಟಗಳ ನಡುವಿನ ವ್ಯತ್ಯಾಸ ಪಟ್ಟಿಮಾಡಿ.
5. ಅಪಧಮನಿ ಮತ್ತು ಅಭಿಧಮನಿಗಳ ನಡುವಿನ ವ್ಯತ್ಯಾಸ ತಿಳಿಸಿ.
5. ಮಾನವನ ಜೀರ್ಣಾಂಗವ್ಯೂಹದಲ್ಲಿ ಈ ಕೆಳಗಿನ ಕಿಣ್ವಗಳ ಕಾರ್ಯವೇನು ?
a] ಟ್ರಿಪ್ಸಿ b] ಲೈಪೇಸ್ c] ಪೆಪ್ಸಿನ್ d] ಅಮೈಲೇಸ್

#### ಅಧ್ಯಾಯ 11. ವಿದ್ಯುಚ್ಛಕ್ತಿ

1. ಈ ಕೆಳಗಿನ ಭೌತ ಪರಿಮಾಣಗಳನ್ನು ನಿರೂಪಿಸಿ ಅವುಗಳ SI ಏಕಮಾನಗಳು ಮತ್ತು ಅಳೆಯಲು ಬಳಸುವ ಸಾಧನಗಳನ್ನು ಹೆಸರಿಸಿ.
a] ವಿದ್ಯುತ್ ಪ್ರವಾಹ b] ವಿಭವಾಂತರ c] ವಾಹಕದ ರೋಧ
d] ವಿದ್ಯುತ್ ಸಾಮರ್ಥ್ಯ
2. ಈ ಕೆಳಗಿನ ನಿಯಮಗಳನ್ನು ನಿರೂಪಿಸಿ ಗಣಿತೀಯ ಸೂತ್ರ ಬರೆಯಿರಿ.
a] ಓಮನ ನಿಯಮ b] ಜೌಲನ ಉಷ್ಣೋತ್ಪಾದನಾ ನಿಯಮ
3. ವಿದ್ಯುತ್ ಮಂಡಲದಲ್ಲಿ ಸಾಮಾನ್ಯವಾಗಿ ಬಳಸುವ ಘಟಕಗಳು ಮತ್ತು ಅವುಗಳ ಚಿಹ್ನೆಗಳನ್ನು ಪಟ್ಟಿಮಾಡಿ.
4. ವಿದ್ಯುತ್ ಉಪಕರಣಗಳನ್ನು ಸರಣಿಯಲ್ಲಿ ಜೋಡಿಸುವುದಕ್ಕಿಂತ ಸಮಾಂತರವಾಗಿ ಜೋಡಿಸುವುದರ ಅನುಕೂಲವೇನು ?

#### ಘಟಕ 2: ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು

1. ದೈನಂದಿನ ಜೀವನದಲ್ಲಿ $P^H$ ನ ಮಹತ್ವ ಬರೆಯಿರಿ.
2. ಕ್ಲೋರ್–ಅಲ್ಕಲಿ ಪ್ರಕ್ರಿಯೆ ಎಂದರೇನು? ಈ ಪ್ರಕ್ರಿಯೆಯಲ್ಲಿ ದೊರೆಯುವ ಪ್ರಮುಖ ಉತ್ಪನ್ನಗಳನ್ನು ಹೆಸರಿಸಿ, ಅವುಗಳ ಉಪಯೋಗಗಳನ್ನು ಪಟ್ಟಿಮಾಡಿ
3. ಈ ಕೆಳಗಿನ ಲವಣ ಸಂಯುಕ್ತಗಳ ಅಣುಸೂತ್ರ ಬರೆದು ಅವುಗಳ ರಾಸಾಯನಿಕ ಹೆಸರು ಮತ್ತು ಎರಡು ಉಪಯೋಗಗಳನ್ನು ತಿಳಿಸಿ.
a] ಚೆಲುವೆ ಪುಡಿ b] ವಾಷಿಂಗ್ ಸೋಡಾ c] ಪ್ಲಾಸ್ಟರ್ ಆಫ್ ಪ್ಯಾರಿಸ್
d] ಅಡುಗೆ ಸೋಡಾ
4. ಸೂಚಕಗಳು ಎಂದರೇನು ? ಈ ಕೆಳಗಿನ ಸೂಚಕಗಳಿಗೆ ಎರಡು ಉದಾಹರಣೆ ಬರೆಯಿರಿ.
a] ನೈಸರ್ಗಿಕ ಸೂಚಕಗಳು b] ಕೃತಕ ಸೂಚಕಗಳು c] ಘ್ರಾಣ ಸೂಚಕಗಳು
5. ಒಬ್ಬ ವಿದ್ಯಾರ್ಥಿಗೆ A, B, ಮತ್ತು C ಎಂಬ ಮೂರು ದ್ರಾವಣಗಳನ್ನು ನೀಡಲಾಗಿದೆ. ಈ ದ್ರಾವಣಗಳ $P^H$ ಕ್ರಮವಾಗಿ 12, 3, 7 ಆಗಿದೆ. ಈ ದ್ರಾವಣಗಳ ಗುಣಗಳನ್ನು ಬರೆಯಿರಿ.

#### ಅಧ್ಯಾಯ 6: ನಿಯಂತ್ರಣ ಮತ್ತು ಸಹಭಾಗಿತ್ವ.

1. ಮಾನವನ ಮಿದುಳಿನ ಮುಖ್ಯ ಭಾಗಗಳು ಯಾವುವು ? ಅವುಗಳ ಕಾರ್ಯವೇನು
2. ಮಾನವನ ದೇಹದಲ್ಲಿ ಉತ್ಪತ್ತಿಯಾಗುವ ಹಾರ್ಮೋನುಗಳನ್ನು ಹೆಸರಿಸಿ ಅವುಗಳ ಕಾರ್ಯಗಳನ್ನು ಬರೆಯಿರಿ.
3. ಸಸ್ಯಗಳಲ್ಲಿ ಉತ್ಪತ್ತಿಯಾಗುವ ಹಾರ್ಮೋನುಗಳನ್ನು ಹೆಸರಿಸಿ ಅವುಗಳ ಕಾರ್ಯಗಳನ್ನು ಬರೆಯಿರಿ.
4. ಸಸ್ಯಗಳಲ್ಲಿ ಬೆಳವಣಿಗೆಯಿಂದ ಉಂಟಾಗುವ ಚಲನೆ/ಅನುವರ್ತನ ಚಲನೆಗಳನ್ನು ಹೆಸರಿಸಿ ಅವುಗಳನ್ನು ನಿರೂಪಿಸಿ.

#### ಅಧ್ಯಾಯ 12: ವಿದ್ಯುತ್ಪ್ರವಾಹದ ಕಾಂತೀಯ ಪರಿಣಾಮಗಳು

1. ಗೃಹಬಳಕೆಯ ವಿದ್ಯುತ್ ಮಂಡಲದಲ್ಲಿ ಈ ಕೆಳಗಿನವುಗಳ ಕಾರ್ಯವೇನು ?
a] ಭೂಸಂಪರ್ಕ ತಂತಿ b] ವಿದ್ಯುತ್ ಫ್ಯೂಜ್
2. ಈ ಕೆಳಗಿನ ವಾಹಕದಲ್ಲಿ ಪ್ರವಹಿಸುವ ವಿದ್ಯುತ್ ನಿಂದ ಉಂಟಾದ ಕಾಂಯಕ್ಷೇತ್ರದ/ ಕಾಂತೀಯ ಬಲರೇಖೆಗಳ ಲಕ್ಷಣ ಬರೆಯಿರಿ.
a] ನೇರವಾದ ವಾಹಕ b] ವೃತ್ತಾಕಾರದ ವಾಹಕ ಸುರುಳಿ c] ಸೊಲೆನಾಯ್ಡ್
3. ಈ ಕೆಳಗಿನ ನಿಯಮಗಳನ್ನು ನಿರೂಪಿಸಿ.
a] ಬಲಗೈ ಹೆಬ್ಬೆರಳ ನಿಯಮ b] ಫ್ಲೇಮಿಂಗನ ಎಡಗೈ ನಿಯಮ
4. ಓವರ್ ಲೋಡ್ ಹೇಗೆ ಉಂಟಾಗುತ್ತದೆ ? ಓವರ್ ಲೋಡ್ ಅನ್ನು ತಪ್ಪಿಸಲು ಅನುಸರಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿ.
5. ಸೊಲೆನಾಯ್ಡ್ ಎಂದರೇನು ? ಒಂದು ಸೊಲೆನಾಯ್ಡ್ ಕಾಂತದಂತೆ ಹೇಗೆ ವರ್ತಿಸುತ್ತದೆ?

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

**ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ**

---

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ

### ಇತಿಹಾಸ ಅಧ್ಯಾಯ : 17

## ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

**1) 1857ರ ಕ್ರಾಂತಿಯನ್ನು "ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ" ಎಂದು ಕರೆದವರು ಯಾರು?**
**ಉತ್ತರ;–** ಭಾರತೀಯ ಇತಿಹಾಸಕಾರರು

**2) 1857ರ ಕ್ರಾಂತಿಯನ್ನು "ಸಿಪಾಯಿ ದಂಗೆ" ಎಂದು ಕರೆದವರು. ಯಾರು?**
**ಉತ್ತರ;–** ಬ್ರಿಟಿಷ್ ಇತಿಹಾಸಕಾರರು

**3) 1857ರ ದಂಗೆಯ ಸಮಯದಲ್ಲಿ"ಭಾರತೀಯ ಚಕ್ರವರ್ತಿ"ಎಂದು ಘೋಷಿಸಲ್ಪಟ್ಟವರು ಯಾರು?**
**ಉತ್ತರ;–** 2ನೇ ಬಹದ್ದೂರ್ ಷಾ

**4) 1857ರ ಕ್ರಾಂತಿಯ ಸಮಯದಲ್ಲಿ ಬ್ಯಾರಕ್‌ಪುರದಲ್ಲಿ ಬ್ರಿಟಿಷ್ ಅಧಿಕಾರಿಯನ್ನು ಕೊಂದವರು ಯಾರು?**
**ಉತ್ತರ;–** ಮಂಗಳಪಾಂಡೆ

**5) 1857ರ ದಂಗೆ ಪ್ರಾರಂಭವಾದ ಸ್ಥಳಯಾವುದು?**
**ಉತ್ತರ;–** ಬ್ಯಾರಕ್‌ಪುರ

**6) ಕಾನ್ಪುರ ದಂಗೆಯ ನಾಯಕತ್ವ ವಹಿಸಿದ್ದವರು ಯಾರು?**
**ಉತ್ತರ;–** ನಾನಾಸಾಹೇಬ್

**7) ಝಾನ್ಸಿರಾಣಿ ಲಕ್ಷ್ಮಿಬಾಯಿ ಬ್ರಿಟಿಷರ ವಿರುದ್ಧ ಹೋರಾಡಲು ಕಾರಣವಾದ ನೀತಿ ಯಾವುದು?**
**ಉತ್ತರ;–** ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ

**8) ಬ್ರಿಟಿಷರು ಇನಾಂ ಆಯೋಗವನ್ನು ಜಾರಿಗೆ ತಂದ ಉದ್ದೇಶವೇನು?**
**ಉತ್ತರ;–** ಬ್ರಿಟಿಷರು ಇನಾಂ ಆಯೋಗವನ್ನು ನೇಮಿಸಿ ಇನಾಂ ಭೂಮಿಯನ್ನು ವಾಪಾಸು ಪಡೆಯುವ ಉದ್ದೇಶವಾಗಿತ್ತು

**9) 1857ರ ದಂಗೆಯ ತಕ್ಷಣದ ಕಾರಣವೇನು?**
**ಉತ್ತರ;–** ರಾಯಲ್ ಎನ್‌ಫೀಲ್ಡ್ ಬಂದೂಕುಗಳನ್ನು ಬಳಕೆಗೆ ತಂದಿದ್ದು ದಂಗೆಗೆ ತಕ್ಷಣದ ಕಾರಣವಾಯಿತು

**10) 1857ರ ದಂಗೆಗೆ ಕಾರಣವಾದ ವದಂತಿ ಏನು? ಭಾರತೀಯ ಸೈನಿಕರು ರಾಯಲ್ ಎನ್‌ಫೀಲ್ಡ್ ಬಂದೂಕುಗಳ ಬಳಕೆಯನ್ನು ಏಕೆ ವಿರೋಧಿಸಿದರು? (ಏಪ್ರಿಲ್ 2019)**
**ಉತ್ತರ;–** ರಾಯಲ್ ಎನ್‌ಫೀಲ್ಡ್ ಬಂದೂಕಿನ ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದಾರೆಂಬ ವದಂತಿ ಹಬ್ಬಿದ ಕಾರಣ ಸೈನಿಕರು ರಾಯಲ್ ಎನ್‌ಫೀಲ್ಡ್ ಬಂದೂಕುಗಳ ಬಳಕೆಯನ್ನು ವಿರೋಧಿಸಿದರು

**11) ಬ್ರಿಟಿಷರು ಮಂಗಲ್ ಪಾಂಡೆಯನ್ನು ಗಲ್ಲಿಗೇರಿಸಲು ಕಾರಣವೇನು?**
**ಉತ್ತರ;–** ರಾಯಲ್ ಎನ್‌ಫೀಲ್ಡ್ ಬಂದೂಕಿನ ತೂಪಾಕಿಗಳನ್ನು ಬಳಸುವುದನ್ನು ವಿರೋಧಿಸಿ ಮಂಗಲ ಪಾಂಡೆಯು ಬ್ರಿಟಿಷ್ ಸೈನ್ಯದ ಅಧಿಕಾರಿಯನ್ನು ಕೊಂದಿದ್ದಕ್ಕಾಗಿ. ಬ್ರಿಟಿಷರು ಮಂಗಲ್ ಪಾಂಡೆಯನ್ನು ಗಲ್ಲಿಗೇರಿಸಿದರು

**12) ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ರಾಜಕೀಯ ಕಾರಣಗಳೇನು?**
**ಉತ್ತರ;–** * ಡಾಲ್ ಹೌಸಿದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ * ಅನೇಕ ದೇಶಿಯ ಸಂಸ್ಥಾನಗಳು ಬ್ರಿಟಿಷರ ವಶವಾದದ್ದು. * ಲಕ್ಷಾಂತರ ಸೈನಿಕರು * ಔಧ್ ನವಾಬನ ಪದಚ್ಯುತಿಗೊಳಿಸಿದ್ದು. * ದೆಹಲಿಯ ಮೊಘಲ್ ಚಕ್ರವರ್ತಿಯನ್ನು ಪದಚ್ಯುತಿಗೊಳಿಸಿದ್ದು. * ಪೇಶ್ವೆಯ ನಿವೃತ್ತಿ ವೇತನ ರದ್ದುಪಡಿಸಿದ್ದು.

**13) ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸೈನಿಕ ಕಾರಣಗಳನ್ನು ತಿಳಿಸಿ**
**ಉತ್ತರ;–** * ಭಾರತೀಯ ಸಿಪಾಯಿಗಳ ಸ್ಥಿತಿ ಶೋಚನಿಯವಾಗಿತ್ತು. * ಉನ್ನತ ಹುದ್ದೆಗಳು ಬ್ರಿಟಿಷರಿಗೆ ಮೀಸಲಾಗಿದ್ದವು. * ಬಡ್ತಿ ಮತ್ತು ವೇತನದಲ್ಲಿ ತಾರತಮ್ಯ * ಭಾರತೀಯ ಸೈನಿಕರು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು. * ರಾಯಲ್ ಎನ್‌ಫೀಲ್ಡ್ ಬಂದೂಕುಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬು ಸವರಿದ್ದು. * ಬ್ರಿಟಿಷ್ ವಶವಾಗಿದ್ದ ರಾಜ್ಯಗಳ ಸೈನಿಕರು ನಿರುದ್ಯೋಗಿಗಳಾದರು

**14) 1857ರ ಕ್ರಾಂತಿಯ ವಿಫಲತೆಗೆ ಕಾರಣಗಳೇನು? / ಭಾರತದ ಪ್ರಥಮ ಸ್ವಾತಂತ್ರ ಸಂಗ್ರಾಮ ವಿಫಲವಾಯಿತು. ಏಕೆ?/ 1857ರ ದಂಗೆಯು ನಿಶ್ಚಿತ ಯಶಸ್ಸು ಕಾಣಲಿಲ್ಲ ಏಕೆ? (ಜೂನ್2018, ಜೂನ್2020, ಎಪ್ರಿಲ್2022, ಜೂನ್2022, ಎಪ್ರಿಲ್2024)**
**ಉತ್ತರ;–** 1. ದಂಗೆಯು ಇಡೀ ಭಾರತಕ್ಕೆ ವ್ಯಾಪಿಸಿರಲಿಲ್ಲ 2. ಸೈನಿಕರಲ್ಲಿ ನಿಶ್ಚಿತ ಗುರಿ ಇರಲಿಲ್ಲ. 3. ಸೂಕ್ತ ಮಾರ್ಗದರ್ಶನದ ಕೊರತೆ ಇತ್ತು 4. ಸೂಕ್ತ ಸೇನಾ ನಾಯಕತ್ವದ ಕೊರತೆ. 5. ಸ್ವಹಿತಾಸಕ್ತಿ ಮತ್ತು ಹಕ್ಕಿಗಾಗಿ ನಡೆದ ದಂಗೆಯಾಗಿತ್ತು 6. ಸೈನಿಕರಲ್ಲಿ ಶಿಸ್ತಿನ ಕೊರತೆ 7. ಭಾರತೀಯ ಸಿಪಾಯಿಗಳಿಗೆ ಆಧುನಿಕ ಶಸ್ತ್ರಾಸ್ತ್ರಗಳಿರಲಿಲ್ಲ 8. ಇದು ಯೋಜಿತ ಹೋರಾಟವಾಗಿರಲಿಲ್ಲ. 9. ದೇಶೀಯ ರಾಜರು ಬ್ರಿಟಿಷರಿಗೆ ತೋರಿದ ನಿಷ್ಠೆ 10. ಸಿಪಾಯಿಗಳು ಮಾಡಿದ ಲೂಟಿ, ದರೋಡೆಗಳು

**15) ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮಗಳೇನು? (ಎಪ್ರಿಲ್ 2023)**
**ಉತ್ತರ;–** * ಈಸ್ಟ್ ಇಂಡಿಯಾ ಕಂಪನಿ ಆಡಳಿತ ಕೊನೆಯಾಯಿತು.
* ರಾಣಿಯ ನೇರ ಆಡಳಿತ ಆರಂಭವಾಯಿತು
* ಭಾರತದ ವ್ಯವಹಾರವನ್ನು ಬ್ರಿಟಿಷ್ ಕಾರ್ಯದರ್ಶಿಗೆ ಒಪ್ಪಿಸಲಾಯಿತು.
* ಕಾನೂನಿನ ಮುಂದೆ ಸಮಾನತೆ ಘೋಷಿಸಲಾಯಿತು
* ಭಾರತೀಯರಿಗೆ ಸುಭದ್ರ ಸರಕಾರದ ಭರವಸೆ ನೀಡಲಾಯಿತು.
* ಮರು ವರ್ಷ ರಾಣಿ 'ಮಹಾಸನ್ನದು' ಹೊರಡಿಸಿದರು.
* ಧಾರ್ಮಿಕ ವಿಚಾರದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂದರು.
* ಭಾರತೀಯರ ಬೆಂಬಲವಿಲ್ಲದೆ ಆಡಳಿತ ನಡೆಸುವುದು ಕಷ್ಟ ಎಂದು ತಿಳಿಯಿತು.

ಭಾರತೀಯರ ಮುಂದಿನ ಹೋರಾಟಕ್ಕೆ ಹೊಸ ದಿಕ್ಸೂಚಿಯಾಯಿತು. ಭಾರತೀಯರಿಗೆ ಸ್ವಾತಂತ್ರ ಹೋರಾಟಕ್ಕೆ ಪರ್ಯಾಯ ಹೋರಾಟ ಮಾರ್ಗದ ಅಗತ್ಯವನ್ನು ಸೂಚಿಸಿತು.

**16) 1858ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳೇನು? /1858ರ ಮಹಾರಾಣಿ ಘೋಷಣೆಯ ಮೂಲಕ ಬ್ರಿಟಿಷರು ಭಾರತೀಯರನ್ನು ಸಂತೈಸಲು ಪ್ರಯತ್ನಿಸಿದರು ಹೇಗೆ?**
* ದೇಶೀಯ ರಾಜರೊಂದಿಗಿನ ಒಪ್ಪಂದಗಳನ್ನು ಅಂಗೀಕರಿಸುವುದು.
* ಈ ಕಾನೂನಿನ ಮುಂದೆ ಸಮಾನತೆಯನ್ನು ನೀಡುವುದು.
* ಧಾರ್ಮಿಕ ವಿಷಯದಲ್ಲಿ ಹಸ್ತಕ್ಷೇಪ ಮಾಡದಿರುವುದು.
* ಸಾಮ್ರಾಜ್ಯ ವಿಸ್ತರಣೆಯ ಅಪೇಕ್ಷೆಯನ್ನು ಕೈಬಿಡುವುದು.
* ಭಾರತೀಯರಿಗೆ ಸುಭದ್ರ ಸರ್ಕಾರವನ್ನು ನೀಡುವುದು.

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಕೊಟ್ರೇಶ್ ಮಾಳಿಗಿ, ಸಮಾಜ ವಿಜ್ಞಾನ ಶಿಕ್ಷಕರು, ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

**ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ**